ನಗರಾಭಿವೃದ್ಧಿ ಪ್ರಾಧಿಕಾರ

ತುಮಕೂರು



2007-08 ನೇ ಸಾಲಿನ

ಲೆಕ್ಕ ತನಿಖಾ ವರದಿ

ಕರ್ನಾಟಕ ಸರ್ಕಾರ

ಸಂ. ಎಲ್‌ಎಟಿ/ನ/ಆ/ಪ್ರಾ/ತು/ ಲೆಕ್ಕ ತನಿಖಾ
ವರದಿ/ 2007-08-711

ಸಹಾಯಕ ನಿಯಂತ್ರಕರ ಕಛೇರಿ
ಸ್ಥಳೀಯ ಲೆಕ್ಕಪರಿಶೋಧನಾ ವರ್ತುಲ
ತುಮಕೂರು. ದಿನಾಂಕ : 27.08.2008

ರವರಿಗೆ,
ಆಯುಕ್ತರು,
ನಗರಾಭಿವೃದ್ಧಿ ಪ್ರಾಧಿಕಾರ
ತುಮಕೂರು

ಮಾನ್ಯರೆ,

ವಿಷಯ : ತುಮಕೂರು ನಗರಾಭಿವೃದ್ಧಿ ಪ್ರಾಧಿಕಾರ ಈ ಸಂಸ್ಥೆಯ 2007-08 ನೇ ಸಾಲಿನ ಲೆಕ್ಕಪತ್ರ ತನಿಖಾ ವರದಿಯನ್ನು ಕಳುಹಿಸುವ ಬಗ್ಗೆ

* * *

ನಗರಾಭಿವೃದ್ಧಿ ಪ್ರಾಧಿಕಾರ, ತುಮಕೂರು, ಈ ಸಂಸ್ಥೆಯ 2007-08 ನೇ ಸಾಲಿನ ಲೆಕ್ಕ ತನಿಖಾ ವರದಿಯನ್ನು ಈ ಪತ್ರದೊಂದಿಗೆ ಲಗತ್ತಿಸಿದೆ. ಸದರಿ ಲೆಕ್ಕ ಪರಿಶೋಧನಾ ವರದಿಯಲ್ಲಿನ ನ್ಯೂನತೆಗಳಿಗೆ ಪ್ರಾಧಿಕಾರದ ಆಡಳಿತ ವರ್ಗದವರು ಕ್ರಮ ತೆಗೆದುಕೊಂಡು ಅನುಸರಣಾ ವರದಿ ಸಲ್ಲಿಸಲು ಸೂಚಿಸಿದೆ.

ಲೆಕ್ಕ ತನಿಖಾ ವರದಿ ತಲುಪಿದ್ದಕ್ಕೆ ಸ್ವೀಕೃತಿ ಕಳುಹಿಸಲು ಕೋರಿದೆ.

ತಮ್ಮ ವಿಶ್ವಾಸಿ

ಸಹಿ/-
ಸಹಾಯಕ ನಿಯಂತ್ರಕರು
ಸ್ಥಳೀಯ ಲೆಕ್ಕ ಪರಿಶೋಧನಾ ವರ್ತುಲ
ತುಮಕೂರು

ನಗರಾಭಿವೃದ್ಧಿ ಪ್ರಾಧಿಕಾರ, ತುಮಕೂರು ಈ ಸಂಸ್ಥೆಯ 2007-08 ನೇ ಸಾಲಿನ ಲೆಕ್ಕ ಪರಿಶೋಧನಾ ವರದಿಯಲ್ಲಿ ಕಂಡುಬಂದ ನ್ಯೂನತೆಗಳು

ಕ್ರಮ ಸಂಖ್ಯೆ	ಭಾಗದ ಸಂಖ್ಯೆ	ಕಂಡಿಕೆ ಸಂಖ್ಯೆ	ಆಕ್ಷೇಪಣೆಯ ವಿವರಗಳು	ಆಕ್ಷೇಪಣೆ ಮೊತ್ತ	ವಸೂಲಾತಿ ಮೊತ್ತ
1	2	1	ಹಿಂದಿನ ಸಾಲಿನ ಲೆಕ್ಕ ತನಿಖಾ ವರದಿಗಳಿಗೆ ಪಾಲನಾ ವರದಿ ಸಲ್ಲಿಸದಿರುವುದು	-	-
2	5	9	ಖಾಸಗಿ ಬಡಾವಣೆಗಳ ಮಂಜೂರಾತಿಯಲ್ಲಿರುವಂತೆ ಶುಲ್ಕಗಳನ್ನು ಕಡಿಮೆ ವಸೂಲಿಸಿರುವುದು	-	326
3	5	10	ನಾಗರೀಕ ಸೌಕರ್ಯ ನಿವೇಶನದ ಬಾಕಿ ಗುತ್ತಿಗೆ ಮೌಲ್ಯ ಪಾವತಿಸದಿರುವುದು	-	7825
4	5	12	ನಾಗರೀಕ ಸೌಕರ್ಯ ನಿವೇಶನದ ಬಾಕಿ ಗುತ್ತಿಗೆ ಮೌಲ್ಯ ಪಾವತಿಸದಿರುವುದು	-	130292
5	5	14	ವೃತ್ತಿ ತೆರಿಗೆಯನ್ನು ಕಡಿಮೆ ಕಟಾಯಿಸಿರುವುದು	-	5340
6	5	15	ಕಾಮಗಾರಿಯಲ್ಲಿ ಆದಾಯ ತೆರಿಗೆ ಕಡಿಮೆ ಕಟಾಯಿಸಿರುವುದು	-	3034
7	5	16	ಜಾಹೀರಾತು ಬಿಲ್‌ನಲ್ಲಿ ಆದಾಯ ತೆರಿಗೆ ಕಟಾಯಿಸದಿರುವುದು	-	244
8	5	17	ಜಾಹೀರಾತು ಬಿಲ್‌ನಲ್ಲಿ ಆದಾಯ ತೆರಿಗೆ ಕಟಾಯಿಸದಿರುವುದು	-	2606
9	5	17	ಹಣಸಂದಾಯ ರಸೀತಿ ಹಾಜರುಪಡಿಸುವುದು, ಆದಾಯ ತೆರಿಗೆ ಕಟಾಯಿಸದಿರುವುದು	808992	40450
10	5	20	ಜಾಹೀರಾತು ಬಿಲ್‌ನಲ್ಲಿ ಆದಾಯ ತೆರಿಗೆ ಕಟಾಯಿಸದಿರುವುದು	-	1809
11	5	21	ಕಾಮಗಾರಿ ಬಿಲ್‌ನಲ್ಲಿ ಹೆಚ್ಚಿಗೆ ಹಣ ಪಾವತಿಸಿರುವುದು	-	1675
12	6	24	ಕಾಮಗಾರಿ ಬಿಲ್‌ನಲ್ಲಿ ಹೆಚ್ಚಿಗೆ ಹಣ ಪಾವತಿಸಿರುವುದು	-	4505
13	6	29	ಕಾಮಗಾರಿ ಬಿಲ್‌ನಲ್ಲಿ ರಾಜಧನ ಕಡಿಮೆ ಕಟಾಯಿಸಿರುವುದು	-	15001
			ಒಟ್ಟು ರೂ.	**808992**	**216107**

ಸಹಾಯಕ ನಿಯಂತ್ರಕರು
ಸ್ಥಳೀಯ ಲೆಕ್ಕ ಪರಿಶೋಧನಾ ವರ್ತುಗ
ತುಮಕೂರು

ನಗರಾಭಿವೃದ್ಧಿ ಪ್ರಾಧಿಕಾರ, ತುಮಕೂರು

2007-08 ನೇ ಸಾಲಿನ ಲೆಕ್ಕ ತನಿಖಾ ವರದಿಗಳ ವಿವರಣೆಗಳು

ಭಾಗ-1

1) ಪೀಠಿಕೆ:

ಈ ಸಂಸ್ಥೆಯ ಲೆಕ್ಕ ತನಿಖೆಯನ್ನು ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಅಧಿನಿಯಮ, 1987 ರ ಸೆಕ್ಷನ್ 48 ರ ಅನ್ವಯ ಕೈಗೊಳ್ಳಲಾಗಿದೆ. ಈ ಸಂಸ್ಥೆಯ 2007-08 ನೇ ಸಾಲಿನ ಲೆಕ್ಕ ತನಿಖೆಯ ಅವಧಿಯು ದಿನಾಂಕ 01.04.2007 ರಿಂದ 31.03.2008 ರವರೆಗಿನ ಅವಧಿಯನ್ನು ಒಳಗೊಂಡಿರುತ್ತದೆ. ಮೇಲ್ಕಂಡ ಸಾಲಿನ ಲೆಕ್ಕ ತನಿಖಾ ಅವಧಿಯಲ್ಲಿ ಕಂಡುಬಂದಂತಹ ನ್ಯೂನತೆಗಳನ್ನು ಮುಂದಿನ ಕಂಡಿಕೆಗಳಲ್ಲಿ ವಿವರಿಸಲಾಗಿದ್ದು, ಈ ಬಗ್ಗೆ ಸಂಸ್ಥೆಯ ಆಡಳಿತ ವರ್ಗ ಅಗತ್ಯ ಕ್ರಮ ಕೈಗೊಂಡು ಅನುಸರಣಾ ವರದಿಯನ್ನು ಸಲ್ಲಿಸಲು ಸೂಚಿಸಿದೆ.

2) ಲೆಕ್ಕ ತನಿಖೆಯ ವಿವರ:

1) ಲೆಕ್ಕ ಪರಿಶೋಧಕರು	:	1) ಶ್ರೀ ಬಿ.ಟಿ. ಲಕ್ಷ್ಮೀರಂಗಯ್ಯ 2) ಶ್ರೀ ಸೋಮಶೇಖರನ್ 3) ಶ್ರೀ ಡಿ.ರಂಗಪ್ಪ 4) ಶ್ರೀ ಎ.ವಿ. ಷಣ್ಮುಖ ಶೆಟ್ಟಿ 5) ಶ್ರೀಮತಿ ಡಿ.ತ್ರಿವೇಣಿ 6) ಶ್ರೀಮತಿ ಎಂ.ಎಸ್.ಶಕುಂತಲ
2) ಲೆಕ್ಕ ತನಿಖೆ ಪ್ರಾರಂಭಿಸಿದ ದಿನಾಂಕ	:	23-05-2008
3) ಲೆಕ್ಕ ತನಿಖೆ ಮುಕ್ತಾಯದ ದಿನಾಂಕ	:	31-05-2008
4) ಲೆಕ್ಕ ತನಿಖೆಗೆ ಉಪಯೋಗಿಸಿದ ಮಾನವ ದಿನಗಳು:		42 ಏಕಮಾನವ ದಿನಗಳು
5) ಕರಡು ಲೆಕ್ಕ ತನಿಖಾ ವರದಿಯನ್ನು ಪುನರ್ ಪರಿಶೀಲನಾ ಅಧಿಕಾರಿಯ ಹೆಸರು ಮತ್ತು ಪದನಾಮ	:	ಶ್ರೀ ಡಿ.ಸಿ. ಮಂಜುನಾಥಯ್ಯ ಸಹಾಯಕ ನಿಯಂತ್ರಕರು
6) ಪುನರ್ ಪರಿಶೀಲನಾ ದಿನಾಂಕ	:	17-06-2008

3) ಸಂಸ್ಥೆಯ ಆಡಳಿತ ವರ್ಗದ ವಿವರ:

1) ಅಧ್ಯಕ್ಷರು	:	1) ಶ್ರೀ ಎಸ್.ಆರ್.ಉಮಾಶಂಕರ್, ಭಾ.ಆ.ಸೇ. ಜಿಲ್ಲಾಧಿಕಾರಿಗಳು, ತುಮಕೂರು 01-04-2007 ರಿಂದ 05-10-2007 2) ಶ್ರೀ ಸುಲ್ತಾನ್ ಮಹಮ್ಮದ್ 01-10-2007 ರಿಂದ 31-03-2008
2) ಆಯುಕ್ತರು	:	ಶ್ರೀ ಎ.ಎಸ್.ರಾಯ್ಕರ್, ಕೆ.ಎಂ.ಎ.ಎಸ್. 01-04-2007 ರಿಂದ 31-03-2008
3) ಸಹಾಯಕ ಕಾರ್ಯಪಾಲಕ ಅಭಿಯಂತರರು	:	ಶ್ರೀ ಡಿ.ಎಸ್. ಹರೀಶ್

ಭಾಗ-2

1) ಹಿಂದಿನ ಸಾಲಿನ ಲೆಕ್ಕ ತನಿಖಾ ವರದಿಗಳ ಬಗ್ಗೆ

ಈ ಸಂಸ್ಥೆಯ ಹಿಂದಿನ ಸಾಲಿನ ಲೆಕ್ಕ ತನಿಖಾ ವರದಿಗಳಿಗೆ ಅನುಸರಣಾ ವರದಿ ಸಲ್ಲಿಸಿರುವುದಿಲ್ಲ. ಹಿಂದಿನ ಸಾಲುಗಳ ಲೆಕ್ಕ ತನಿಖಾ ವರದಿಗಳಲ್ಲಿ ಸೂಚಿಸಿರುವ ಆಕ್ಷೇಪಣಾ ಮೊಬಲಗು ಹಾಗೂ ವಸೂಲಾತಿ ಮೊಬಲಗಿಗೆ ಸಂಸ್ಥೆಯ ಆಡಳಿತವರ್ಗ ಕ್ರಮ ತೆಗೆದುಕೊಡು ಅನುಸರಣಾ ವರದಿಯನ್ನು ಸಲ್ಲಿಸಲು ಸೂಚಿಸಿದೆ. ಈ ಸಂಸ್ಥೆಯ ಹಿಂದಿನ ಸಾಲುಗಳ ಲೆಕ್ಕ ತನಿಖಾ ವರದಿಗಳಲ್ಲಿ ಇತ್ಯರ್ಥವಾಗದೇ ಬಾಕಿ ಉಳಿದಿರುವ ಆಕ್ಷೇಪಣಾ ಮೊಬಲಗು ಹಾಗೂ ವಸೂಲಾತಿಯ ಮೊಬಲಗಿನ ವಿವರವನ್ನು ಅನುಬಂಧ-1 ರಲ್ಲಿ ವಿವರಿಸಿದೆ. ಅದರಂತೆ 31.03.2007 ರ ಅಂತ್ಯಕ್ಕೆ 1,32,23,255.00 ರೂ.ಗಳ ಆಕ್ಷೇಪಣಾ ಮೊತ್ತ ಹಾಗೂ 13,71,753.00 ರೂ.ಗಳ ವಸೂಲಾತಿ ಮೊತ್ತಗಳು ತೀರುವಳಿಯಾಗದೆ ಬಾಕಿ ಉಳಿದಿದ್ದು ಈ ಬಗ್ಗೆ ಆಯುಕ್ತರು ಸೂಕ್ತ ಕ್ರಮ ಕೈಗೊಳ್ಳಲು ಸೂಚಿಸಿದೆ.

ಭಾಗ-3

1) ಆರ್ಥಿಕ ಪರಿಸ್ಥಿತಿ ಬಗ್ಗೆ:

2007-08 ನೇ ಸಾಲಿಗೆ ಪ್ರಾಧಿಕಾರದ ನಿಧಿಯ ಆರ್ಥಿಕ ಪರಿಸ್ಥಿತಿ ಈ ಕೆಳಕಂಡಂತೆ ಇರುತ್ತದೆ.

01-04-2007 ಕ್ಕೆ ಪ್ರಾರಂಭ ಶಿಲ್ಕು	7476131.00
2007-08 ನೇ ಸಾಲಿಗೆ ಜಮಾ	63594950.00
ಒಟ್ಟು ರೂ.	**71071081.00**
2007-08 ಕ್ಕೆ ಖರ್ಚು	47902552.00
31.03.2008 ಕ್ಕೆ ಅಂತಿಮ ಶಿಲ್ಕು	**23168529.00**

ದಿನಾಂಕ 31-03-2008 ರ ಅಂತ್ಯಕ್ಕೆ ಲೆಕ್ಕಗಳ ಸಮನ್ವಯ:

1. ಸಾಮಾನ್ಯ ನಗದು ಪುಸ್ತಕದ ಪ್ರಕಾರ ಅಂತಿಮ ಶಿಲ್ಕು	2,31,68,529.00
2. ಕೆಳಕಂಡ ಬ್ಯಾಂಕ್ ಪಾಸ್‌ಪುಸ್ತಕಗಳ ಪ್ರಕಾರ ಅಂತಿಮ ಶಿಲ್ಕು	
1) ಎಸ್.ಬಿ.ಎಂ. ಖಾತೆ ಸಂ,54040240375	9,70,588.00
2) ಕೆ.ಜಿ.ಬಿ., ಎಂ.ಜಿ.ರಸ್ತೆ ಖಾತೆ ಸಂಖ್ಯೆ.6782 ರಲ್ಲಿ	1,17,52,102.00
3) ಎಸ್.ಬಿ.ಎಂ. ಖಾತೆ ಸಂಖ್ಯೆ 6402191981 ರಲ್ಲಿ	23,11,054.00
4) ಎಸ್.ಬಿ.ಟಿ., ತುಮಕೂರು ಖಾತೆ ಸಂಖ್ಯೆ 67026651355 ರಲ್ಲಿ	3,97,637.00
5) ಎಸ್.ಬಿ.ಟಿ. ತುಮಕೂರು ಖಾತೆ ಸಂಖ್ಯೆ 67021499122 ರಲ್ಲಿ	70,571.00
6) ಎಸ್.ಬಿ.ಟಿ. ತುಮಕೂರು ಖಾತೆ ಸಂಖ್ಯೆ 67026650849 ರಲ್ಲಿ	76,71,480.00
7) ಅಲಹಾಬಾದ್ ಬ್ಯಾಂಕ್ ಖಾತೆ ಸಂಖ್ಯೆ 7443 ರಲ್ಲಿ	15,572.00
8) ವಿಜಯಾ ಬ್ಯಾಂಕ್, ತುಮಕೂರು ಖಾತೆ ಸಂಖ್ಯೆ 12467 ರಲ್ಲಿ	2,50,314.00
ಒಟ್ಟು ರೂ.	**2,34,39,318.00**
ಸಾಮಾನ್ಯ ನಗದು ಪುಸ್ತಕದ ಪ್ರಕಾರ ಶಿಲ್ಕು	2,31,68,529.00
ಮೇಲ್ಕಂಡ ಬ್ಯಾಂಕ್‌ಗಳಲ್ಲಿನ ಅಂತಿಮ ಶಿಲ್ಕು	2,34,39,318.00
ವೈತ್ಯಾಸ ಮೊಬಲಗು	**2,70,789.00**

ವೈತ್ಯಾಸಕ್ಕೆ ಕಾರಣ ದಿನಾಂಕ 31-03-2008 ರ ಅಂತ್ಯಕ್ಕೆ ನಗದಾಗದೇ ಇರುವ ಚೆಕ್ಕುಗಳ ಮೊತ್ತ 270789.00 ರೂ.ಗಳು. ನಗದಾಗದೆ ಇರುವ ಚೆಕ್ಕುಗಳ ವಿವರವನ್ನು ಅನುಬಂಧ-2 ರಲ್ಲಿ ವಿವರಿಸಿ ವರದಿಗೆ ಲಗತ್ತಿಸಿರುತ್ತೆ.

ಈ ಸಂಸ್ಥೆಯ 2007-08 ನೇ ಸಾಲಿಗೆ ವರ್ಗೀಕೃತ ಜಮಾ ಹಾಗೂ ಖರ್ಚಿನ ವಿವರವನ್ನು ಅನುಬಂಧ-3 ರಲ್ಲಿ ವಿವರಿಸಿದೆ.

2) ಸಾಮಾನ್ಯ ನಗದು ಪುಸ್ತಕದಲ್ಲಿ ಕಂಡುಬಂದ ನ್ಯೂನತೆಗಳು:

2007-08 ನೇ ಸಾಲಿನಲ್ಲಿ ಈ ಸಂಸ್ಥೆಯು ನಿರ್ವಹಿಸಿರುವ ಸಾಮಾನ್ಯ ನಗದು ಪುಸ್ತಕವನ್ನು ಪರಿಶೀಲಿಸಲಾಗಿ ಕೆಳಕಂಡ ನ್ಯೂನತೆಗಳು ಕಂಡುಬಂದಿರುತ್ತವೆ.

- ಸಾಮಾನ್ಯ ನಗದು ಪುಸ್ತಕದಲ್ಲಿ ಜಮೆಯ ಕಾಲಂನಲ್ಲಿ ಜಮೆಯ ವಿವರಗಳನ್ನು ಬರೆದಿರುವುದಿಲ್ಲ.
- ಪಾವತಿಯ ಕಾಲಂನಲ್ಲಿ ಪಾವತಿಯ ವಿವರಗಳನ್ನು ಸರಿಯಾಗಿ ಬರೆದಿರುವುದಿಲ್ಲ.
- ತಿಂಗಳ ಅಂತ್ಯಕ್ಕೆ ಸಾಮಾನ್ಯ ನಗದು ಪುಸ್ತಕದಲ್ಲಿ ಜಮೆಯ ಹಾಗೂ ಪಾವತಿಯ ಒಟ್ಟು ಫೋಷ್ಟಾರೆ ಹಾಕಿರುವುದಿಲ್ಲ.
- ಸಾಮಾನ್ಯ ನಗದು ಪುಸ್ತಕದಲ್ಲಿ ತಿಂಗಳ ಅಂತ್ಯಕ್ಕೆ ಬ್ಯಾಂಕ್ ಪಾಸ್ ಪುಸ್ತಕದಲ್ಲಿರುವ ಅಂತಿಮ ಶಿಲ್ಕಿಗೆ ತಾಳೆ ಮಾಡಿಕೊಂಡು ಲೆಕ್ಕ ಸಮನ್ವಯ ಮಾಡಿಕೊಂಡಿರುವುದಿಲ್ಲ.

ಮೇಲ್ಕಂಡ ನ್ಯೂನತೆಗಳ ನಿವಾರಣೆಗೆ ಸಂಸ್ಥೆಯ ಆಡಳಿತ ವರ್ಗದವರು ಕ್ರಮ ತೆಗೆದುಕೊಳ್ಳುವದು.

3) ಆಯವ್ಯಯದ ಬಗ್ಗೆ

ಈ ಸಂಸ್ಥೆಯ 2007-08 ನೇ ಸಾಲಿನ ಆಯವ್ಯಯಕ್ಕೆ ಪ್ರಾಧಿಕಾರದ ಸಭೆಯ ನಿರ್ಣಯ ಸಂಖ್ಯೆ 01 ದಿನಾಂಕ 10.05.2007 ರಲ್ಲಿ ಮಂಜೂರಾತಿ ಪಡೆಯಲಾಗಿದೆ. 2007-08 ನೇ ಸಾಲಿಗೆ ನಿರೀಕ್ಷಿತ ಮಂಜೂರಾದ ಆದಾಯ ಹಾಗೂ ವೆಚ್ಚ ಹಾಗೂ ವಾಸ್ತವಿಕ ಆದಾಯ ಹಾಗೂ ವೆಚ್ಚಗಳು ಈ ಕೆಳಕಂಡಂತೆ ಇರುತ್ತದೆ.

ವಿವರ	ಆದಾಯ	ವೆಚ್ಚ
ನಿರೀಕ್ಷಿತ	262664583.00	251580000.00
ವಾಸ್ತವಿಕ	133830822.00	135922712.00

ಮೇಲ್ಕಂಡ ಅಂಕಿ ಅಂಶಗಳನ್ನು ಅವಲೋಕಿಸಿದಾಗ ಆಯವ್ಯಯವನ್ನು ಮಾರ್ಗಸೂಚಿಗಳನ್ವಯ ತಯಾರಿಸದಿರುವುದು ಕಂಡುಬರುತ್ತದೆ. ಇನ್ನು ಮುಂದೆ ಆಯವ್ಯಯವನ್ನು ವಾಸ್ತವಿಕತೆಗೆ ಹತ್ತಿರವಿರುವಂತೆ ತಯಾರಿಸಲು ಕ್ರಮ ಕೈಗೊಳ್ಳಲು ಸೂಚಿಸಿದೆ.

4) ಸಾಲಗಳ ಬಗ್ಗೆ

ಸಾಲದ ವಹಿಯನ್ನು ನಿಗಧಿತ ನಮೂನೆಯಲ್ಲಿ ನಿರ್ವಹಿಸಿರುವುದಿಲ್ಲ. ಸಾಲದ ವಹಿಯನ್ನು ನಿಗಧಿತ ನಮೂನೆಯಲ್ಲಿ ನಿರ್ವಹಿಸಲು ಸೂಚಿಸಿದೆ. ಸದರಿ ವಹಿಯಲ್ಲಿ ಸಾಲ ಪಡೆದ ವಿವರ, ಯೋಜನೆಯ ಹೆಸರು ಹಾಗೂ ಮರುಪಾವತಿಯ ವಿವರಗಳನ್ನು ಬರೆಯಲು ಸೂಚಿಸಿದೆ. ಹಾಲಿ ನಿರ್ವಹಿಸಿರುವ ಸಾಲದ ವಹಿ ಹಾಗೂ ಕಡತಗಳನ್ನು ಪರಿಶೀಲಿಸಲಾಗಿ ಕರ್ನಾಟಕ ನಗರ ಮೂಲಸೌಕರ್ಯ ಅಭಿವೃದ್ಧಿ ಸಂಸ್ಥೆಯಿಂದ ಎ.ಡಿ.ಬಿ. ಸಾಲವನ್ನು ಕೆಳಕಂಡ ಯೋಜನೆಗಳಿಗೆ ಪಡೆದಿರುತ್ತಾರೆ.

- ಮೆಳೇಕೋಟೆ - ವೀರಸಾಗರ ವಸತಿ ಯೋಜನೆ
- ಟ್ರಕ್ ಟರ್ಮಿನಲ್ ಯೋಜನೆ
- ವರ್ತುಲ ರಸ್ತೆ ನಿರ್ಮಾಣಕ್ಕೆ

ಈ ಮೇಲ್ಕಂಡ ಮೂರು ಯೋಜನೆಗಳಿಗೆ ಪಡೆದಿರುವ ಸಾಲದ ಒಟ್ಟು ಮೊತ್ತ 23,15,14,761.00 ರೂ.ಗಳಾಗಿರುತ್ತದೆ. ಸದರಿ ಯೋಜನೆಗಳಿಗೆ ಪಡೆದಿರುವ ಸಾಲದ ಕಂತು ಹಾಗೂ ಬಡ್ಡಿಯನ್ನು ಪ್ರತಿ ಮೂರು ತಿಂಗಳಿಗೆ ಒಂದು ಕಂತಿನಂತೆ ಜೂನ್ 2021 ನೇ ಸಾಲಿನವರೆಗೆ ಪಾವತಿಸಬೇಕು. ಮಾರ್ಚ್ 2008 ರ ಅಂತ್ಯಕ್ಕೆ ಈ ಸಂಸ್ಥೆಯು ಪಾವತಿಸಬೇಕಾದ ಸಾಲ ಹಾಗೂ ಬಡ್ಡಿಯ ವಿವರ ಕೆಳಕಂಡಂತೆ ಇರುತ್ತದೆ.

1.	ಅಸಲು ರೂ.	9,64,60,450.00
2	ಬಡ್ಡಿ ರೂ.	13,60,81,065.00
	ಒಟ್ಟು ರೂ.	**23,25,41,515.00**

2007-08 ನೇ ಸಾಲಿನವರೆಗೆ ಈ ಸಂಸ್ಥೆಯು ಅಸಲು ಹಾಗೂ ಬಡ್ಡಿ ಸೇರಿ 96690808.00 ರೂ.ಗಳನ್ನು ಪಾವತಿಸಿರುತ್ತಾರೆ. 31-03-2008 ರ ಅಂತ್ಯಕ್ಕೆ ಅಸಲು ಮತ್ತು ಬಡ್ಡಿ ಸೇರಿ ಒಟ್ಟು ರೂ.135850707.00 ಗಳು ಬಾಕಿ ಉಳಿದಿರುತ್ತದೆ.

ಕರ್ನಾಟಕ ನಗರ ಮೂಲಸೌಕರ್ಯ ಅಭಿವೃದ್ಧಿ ಸಂಸ್ಥೆಗೆ ಪ್ರತಿ ಮೂರು ತಿಂಗಳಿಗೆ ಒಂದು ಕಂತು ಅಸಲು ಹಾಗೂ ಬಡ್ಡಿ ಪಾವತಿಸಬೇಕಾಗಿದ್ದು ಪಾವತಿ ಮಾಡಿರುವುದಿಲ್ಲ. ಬಾಕಿ ಉಳಿದಿರುವ ಅಸಲು ಹಾಗೂ ಬಡ್ಡಿಯನ್ನು ಪ್ರತಿ ಮೂರು ತಿಂಗಳಿಗೆ ಒಂದು ಕಂತಿನಂತೆ ಸಂದಾಯ ಮಾಡಲು ಸಂಸ್ಥೆಯ ಆಡಳಿತ ವರ್ಗದವರು ಕ್ರಮ ತೆಗೆದುಕೊಳ್ಳುವುದು.

5) ಮುಂಗಡಗಳು:

ಮುಂಗಡ ವಹಿಯನ್ನು ನಿರ್ವಹಿಸಿರುತ್ತಾರೆ. ಸದರಿ ವಹಿಯನ್ನು ಪರಿಶೀಲಿಸಲಾಗಿ ಆರ್ಥಿಕ ವರ್ಷದ ಅಂತ್ಯಕ್ಕೆ ಫೋಷ್ಟಾರೆಯನ್ನು ಹಾಕಿರುವುದಿಲ್ಲ. ಹಿಂದಿನ ಸಾಲಿನ ಲೆಕ್ಕ ತನಿಖಾ ವರದಿಯಂತೆ ಮುಂಗಡಗಳ ವ್ಯವಹಾರ 2007-08 ನೇ ಸಾಲಿಗೆ ಈ ಕೆಳಕಂಡಂತೆ ಇರುತ್ತದೆ.

01.04.2007 ಕ್ಕೆ ಪ್ರಾರಂಭ ಶಿಲ್ಕು	20568703.00
2007-08 ನೇ ಸಾಲಿಗೆ ಮುಂಗಡ ಪಾವತಿ	--
ಒಟ್ಟು ರೂ.	**20568703.00**
2007-08 ರಲ್ಲಿ ಮುಂಗಡ ಹೊಂದಾಣಿಕೆ	--
31-03-2008 ಕ್ಕೆ ಬಾಕಿ	20568703.00

ಬಾಕಿ ಉಳಿದಿರುವ ಮುಂಗಡಗಳ ಹೊಂದಾಣಿಕೆ ಬಗ್ಗೆ ಹಿಂದಿನ ಸಾಲಿನ ಲೆಕ್ಕ ತನಿಖಾ ವರದಿಗಳಲ್ಲಿ ಪ್ರಸ್ತಾಪಿಸಿದಂತೆ ಕ್ರಮ ಕೈಗೊಂಡಿರುವುದಿಲ್ಲ. ಈ ಬಗ್ಗೆ ಪ್ರಾಧಿಕಾರದ ಆಡಳಿತ ವರ್ಗದವರು ಕೂಡಲೇ ಕ್ರಮ ತೆಗೆದುಕೊಳ್ಳುವುದು.

6) ಠೇವಣಿಗಳ ಬಗ್ಗೆ:

ಠೇವಣಿ ವಹಿಯನ್ನು ನಿರ್ವಹಿಸಿರುವುದಿಲ್ಲ. ಸದರಿ ವಹಿಯನ್ನು ನಿಗಧಿತ ನಮೂನೆಯಲ್ಲಿ ನಿರ್ವಹಿಸಲು ಪ್ರಾಧಿಕಾರದ ಆಡಳಿತ ವರ್ಗ ಕ್ರಮ ತೆಗೆದುಕೊಳ್ಳುವುದು. 2007-08 ನೇ ಸಾಲಿನಲ್ಲಿ ಸ್ವೀಕರಿಸಿದ ಇ.ಎಂ.ಡಿ ಹಾಗೂ ಭದ್ರತಾ ಠೇವಣಿಯನ್ನು ಸದರಿ ವಹಿಯಲ್ಲಿ ದಾಖಲಿಸಿ ಹಾಗೂ ಮರುಪಾವತಿಯ ವಿವರವನ್ನು ದಾಖಲಿಸಲು ಕ್ರಮ ತೆಗೆದುಕೊಳ್ಳುವುದು

6ಎ) ನಿವೇಶನಗಳ ಠೇವಣಿ ವಹಿ ಬಗ್ಗೆ

ನಗರಾಭಿವೃದ್ಧಿ ಪ್ರಾಧಿಕಾರದಿಂದ ನಿವೇಶನಗಳನ್ನು ಹಂಚಿಕೆ ಮಾಡುವ ಸಂದರ್ಭದಲ್ಲಿ ನಿವೇಶನ ಮೊತ್ತದ ಶೇ.25 ರಷ್ಟನ್ನು ಪ್ರಾರಂಭಿಕ ಠೇವಣಿಯಾಗಿ ಸ್ವೀಕರಿಸಿದ್ದು ಈ ಸಂಬಂಧವಾಗಿ ಪ್ರತ್ಯೇಕ ವಹಿಯನ್ನು ನಿರ್ವಹಿಸಿದೆ. ವಿವರಗಳನ್ನು ದಾಖಲಿಸಿರುವುದಿಲ್ಲ. ಇದರಿಂದ ನಿವೇಶನ ಹಂಚಿಕೆ ಸಂದರ್ಭದಲ್ಲಿ ಸಾರ್ವಜನಿಕರಿಂದ ಪಡೆದ ಠೇವಣಿ ಮೊತ್ತವೆಷ್ಟು? ಅದರಲ್ಲಿ 31-03-2008 ರ ಅಂತ್ಯದವರೆವಿಗೆ ಮರುಪಾವತಿಸಲಾದ ಹಾಗೂ ಬಾಕಿ ಇರುವ ಮೊತ್ತಗಳೆಷ್ಟು ಎಂಬುದನ್ನು ಪರಿಶೀಲಿಸಲು ಸಾಧ್ಯವಾಗಿರುವುದಿಲ್ಲ. ಸದರಿ ವಹಿಯನ್ನು ನಿರ್ವಹಿಸದಿರುವ ಬಗ್ಗೆ ಆಯುಕ್ತರ ವಿವರಣೆ ಅಗತ್ಯವಿದೆ ಹಾಗೂ ವಹಿಯನ್ನು ಕೂಡಲೇ ನಿರ್ವಹಿಸಲು ಸೂಚಿಸಿದೆ.

7) ಹೂಡಿಕೆಗಳ ಬಗ್ಗೆ

ಹೂಡಿಕೆ ವಹಿಯನ್ನು ನಿಗದಿತ ನಮೂನೆಯಲ್ಲಿ ನಿರ್ವಹಿಸಿರುವುದಿಲ್ಲ. ಸದರಿ ವಹಿಯನ್ನು ನಿಗದಿತ ನಮೂನೆಯಲ್ಲಿ ನಿರ್ವಹಿಸಲು ಸೂಚಿಸಿದೆ. 2007-08 ನೇ ಸಾಲಿಗೆ ಹೂಡಿಕೆಗಳ ವ್ಯವಹಾರ ಕೆಳಕಂಡಂತೆ ಇರುತ್ತದೆ.

01.04.2007 ಕ್ಕೆ ಪ್ರಾರಂಭ ಶಿಲ್ಕು	22607160.00
2007-08 ನೇ ಸಾಲಿಗೆ ಹೂಡಿಕೆಗಳು	30000000.00
ಒಟ್ಟು ರೂ.	**52607160.00**
2007-08 ನೇ ಸಾಲಿಗೆ ನಗದೀಕರಣ	17500000.00
31-03-2008 ಕ್ಕೆ ಉಳಿಕೆ	35107160.00

ದಿನಾಂಕ 31-03-2008 ರ ಅಂತ್ಯಕ್ಕೆ ನಗದಾಗದೆ ಬಾಕಿ ಉಳಿದಿರುವ ಹೂಡಿಕೆಗಳ ವಿವರವನ್ನು ಅನುಬಂಧ-4 ರಲ್ಲಿ ವಿವರಿಸಿ ಈ ವರದಿಯೊಂದಿಗೆ ಲಗತ್ತಿಸಿದೆ.

2007-08 ನೇ ಸಾಲಿನಲ್ಲಿ ಪಕ್ವಗೊಂಡಿರುವ ಹೂಡಿಕೆಗಳ ಮೊತ್ತ 17500000.00 ರೂ.ಗಳನ್ನು ಎಸ್.ಬಿ.ಎಂ., ತುಮಕೂರು ಶಾಖೆಯಿಂದ ನಗದೀಕರಿಸಿ ಹೂಡಿಕೆ ಮೊತ್ತ ಹಾಗೂ ಬಡ್ಡಿ ಸೇರಿಸಿ ಒಟ್ಟು 19237313.00 ರೂ.ಗಳನ್ನು ದಿನಾಂಕದಂದು ಎ.ಡಿ.ಬಿ. ನಿಧಿಯ ಎಸ್.ಬಿ.ಎಂ ಮುಖ್ಯ ಶಾಖೆ ಸಂಖ್ಯೆ5404021436 ಕ್ಕೆ ದಿನಾಂಕ 19-03-2008 ರಂದು ಜಮಾ ಮಾಡಿರುತ್ತಾರೆ. ಅನುಬಂಧ-4 ರಲ್ಲಿ ತೋರಿಸಿರುವ 7 ನಿಶ್ಚಿತ ಠೇವಣಿಗಳು 2:2008, 4:2008 ಹಾಗೂ 6:2008 ರಲ್ಲಿ ಪರಿಪಕ್ವವಾಗಿದ್ದರೂ ಸಹ ಸದರಿ ನಿಶ್ಚಿತ ಠೇವಣಿಗಳನ್ನು ನವೀಕರಿಸುವ ಬಗ್ಗೆ ಕ್ರಮ ಕೈಗೊಂಡಿರುವುದಿಲ್ಲ. ಈ ಬಗ್ಗೆ ಆಯುಕ್ತರ ಕ್ರಮ ಅವಶ್ಯವಿದೆ.

ಭಾಗ-4

8) ರಸೀದಿ ಪುಸ್ತಕಗಳ ಖರೀದಿ, ಉಪಯೋಗ ಹಾಗೂ ಉಳಿಕೆ ಬಗ್ಗೆ

2007-08 ನೇ ಸಾಲಿನ ನಗರಾಭಿವೃದ್ಧಿ ಪ್ರಾಧಿಕಾರದ ರಸೀದಿ ಪುಸ್ತಕ ದಾಸ್ತಾನು ವಹಿ ಮತ್ತು ವಿತರಣೆ ವಿವರ ಈ ಕೆಳಕಂಡಂತೆ ಇರುತ್ತದೆ.

01-04-2007 ಕ್ಕೆ ಪ್ರಾರಂಭ ಶಿಲ್ಕು	28
2007-08 ನೇ ಸಾಲಿಗೆ ಸ್ವೀಕೃತಿ	100
ಒಟ್ಟು	**128**
2007-08 ನೇ ಸಾಲಿಗೆ ಉಪಯೋಗ	67
31-03-2008 ಕ್ಕೆ ಉಳಿಕೆ	61

1. ರಸೀದಿ ಪುಸ್ತಕ ಸಂಖ್ಯೆ 239 ರ 16901 ರಿಂದ 16934 ರವರೆಗೆ ಭಾಗಶಃ ಪರಿಶೀಲಿಸಿದ್ದು 2008-09 ನೇ ಸಾಲಿಗೆ ಮುಂದುವರೆದಿರುತ್ತದೆ.
2. ಲೆಕ್ಕ ತನಿಖಾ ಸಮಯಕ್ಕೆ ರಸೀದಿ ಪುಸ್ತಕ ಸಂಖ್ಯೆ 240 ರಿಂದ 247 ವರೆಗೆ 2008-09 ನೇ ಸಾಲಿಗೆ ಉಪಯೋಗದಲ್ಲಿರುತ್ತವೆ.
3. ರಸೀದಿ ಪುಸ್ತಕ ಸಂಖ್ಯೆ 248 ರಿಂದ 300 ವರೆಗೆ ದಾಸ್ತಾನಿನಲ್ಲಿ ಒಟ್ಟು 53 ರಸೀದಿ ಪುಸ್ತಕಗಳು ಬಾಕಿ ಉಳಿದಿರುತ್ತವೆ.

ಭಾಗ-5

9) ಖಾಸಗಿ ಬಡಾವಣೆಗಳ ಮಂಜೂರಾತಿಯಲ್ಲಿ ಉತ್ತಮತೆ ಶುಲ್ಕ ಕಡಿಮೆ ವಸೂಲಿಸಿರುವುದು

2007-08 ನೇ ಸಾಲಿನಲ್ಲಿ ಮಂಜೂರಾತಿ ನೀಡಿರುವ ಖಾಸಗಿ ಬಡಾವಣೆಗಳ ಕಡತಗಳನ್ನು ಪರಿಶೀಲಿಸಲಾಗಿ ಕೆಳಕಂಡ ಖಾಸಗಿ ಬಡಾವಣೆಗಳ ಮಂಜೂರಾತಿಯಲ್ಲಿ ಉತ್ತಮತೆ ಶುಲ್ಕ ಹಾಗೂ ಸ್ಲಮ್ ಸೆಸ್‌ನ್ನು ಕಡಿಮೆ ವಸೂಲಿ ಮಾಡಿರುತ್ತಾರೆ.

ಕ್ರಮ ಸಂಖ್ಯೆ	ವಿವರ		ಉತ್ತಮತೆ ಶುಲ್ಕ	ಸ್ಲಮ್ ಸೆಸ್
1	ಶ್ರೀ ಎಂ.ನಾರಾಯಣಿ ಬಿನ್ ಮೈಲಾರಪ್ಪ, ಡಿ.ಮರಳೇನಹಳ್ಳಿ ಗ್ರಾಮದ ಸ.ನಂ.34:7, 34:8ಎ2, 34/8ಬಿರಲ್ಲಿ 1 ಎಕರೆ 13 ಗುಂಟೆ 0-49 ಪ್ರದೇಶಕ್ಕೆ ವಸತಿ ವಿನ್ಯಾಸ ಮಂಜೂರಾತಿ	ವಸೂಲಿ ಮಾಡಬೇಕಾದ್ದು	21637	5409
		ವಸೂಲಿ ಮಾಡಿರುವುದು	21476	5309
		ಕಡಿಮೆ ವಸೂಲಿ ರೂ.	**161**	**40**
2	ಶ್ರೀ ಬಿ.ಗಂಗಾಧರಯ್ಯ ಮತ್ತು ಇತರರು, ಶೆಟ್ಟಿಹಳ್ಳಿ ಗ್ರಾಮದ ಸ.ನಂ. 75:1ಎ4 ರಲ್ಲಿ 1 ಎಕರೆ 26 ಗುಂಟೆ (71874 ಚ.ಅಡಿ)	ವಸೂಲಿ ಮಾಡಬೇಕಾದ್ದು	26708	6673
		ವಸೂಲಿ ಮಾಡಿರುವುದು	26608	6652
		ಕಡಿಮೆ ವಸೂಲಿ ರೂ.	**100**	**25**

ಮೇಲ್ಕಂಡ ಖಾಸಗಿ ಬಡಾವಣೆಗಳ ವಸತಿ ವಿನ್ಯಾಸ ಮಂಜೂರಾತಿಯಿಂದ ಕಡಿಮೆ ವಸೂಲಿ ಮಾಡಿರುವ ಉತ್ತಮತೆ ಶುಲ್ಕ ಹಾಗೂ ಸ್ಲಮ್ ಸೆಸ್ ಒಟ್ಟು 326.00 ರೂ.ಗಳನ್ನು ಸಂಬಂಧಿಸಿದವರಿಂದ ವಸೂಲಿ ಮಾಡಲು ಕ್ರಮ ತೆಗೆದುಕೊಳ್ಳುವುದು.

10) ನಾಗರೀಕ ಸೌಕರ್ಯ ನಿವೇಶನದ ಬಾಕಿ ಗುತ್ತಿಗೆ ಮೌಲ್ಯ ಪಾವತಿಸದೇ ಇರುವುದು:

ಕರ್ನಾಟಕ ಭೂಸೇನಾ ನಿಗಮ ನಿಯಮಿತ, ತುಮಕೂರು ಇವರಿಗೆ ಕ್ಯಾತ್ಸಂದ್ರ ಗ್ರಾಮದ ಸರ್ವೆ ನಂ.76:4 ರಲ್ಲಿ 135x115 ಅಡಿ ಅಳತೆಯ ನಾಗರೀಕ ಸೌಕರ್ಯ ನಿವೇಶನವನ್ನು ದಿನಾಂಕ 11-10-2004 ರಂದು ಹಂಚಿಕೆ ಮಾಡಲಾಗಿದೆ.

1)	ಪಾವತಿಸಬೇಕಾದ ನಿವೇಶನ ಮೌಲ್ಯ		4,34,700.00
2)	ಪಾವತಿಸಬೇಕಾದ ನೋಂದಣಿ ಶುಲ್ಕ		2,000.00
3)	ಒಟ್ಟು ಪಾವತಿಸಬೇಕಾದ ಮೊತ್ತ ರೂ.		4,36,700.00
4)	ಪಾವತಿಸಿರುವ ಮೊತ್ತ		
	a) ಪ್ರಾರಂಭಿಕ ಠೇವಣಿ ರಸೀದಿ ನಂ.8817/29-05-04	43470	
	b) ರ.ಸ.98300 : 22-11-04	53946	
	c) ರ.ಸ. 12348 : 09-06-06	331449	4,28,865.00
	ಬಾಕಿ ವಸೂಲಿ ರೂ.		**7,835.00**

ಸದರಿ ಸಂಸ್ಥೆಗೆ ದಿನಾಂಕ 20-07-2006 ರಂದು ಗುತ್ತಿಗೆ ಕರಾರನ್ನು ನೊಂದಣಿ ಮಾಡಿಸಿಕೊಂಡಿರುತ್ತಾರೆ. ಸದರಿ ಸಂಸ್ಥೆಯು ಬಾಕಿ ಉಳಿಸಿಕೊಂಡಿರುವ ಗುತ್ತಿಗೆ ಹಣ ಒಟ್ಟು 7835.00 ರೂ.ಗಳನ್ನು ವಸೂಲಿ ಮಾಡಲು ಕ್ರಮ ತೆಗೆದುಕೊಳ್ಳುವುದು. ಸದರಿ ಸಂಸ್ಥೆಯು ವಿಳಂಬವಾಗಿ ಪಾವತಿಸಿರುವ ಗುತ್ತಿಗೆ ಹಣ ರೂ.331449.00 ರೂ.ಗೆ ದಿನಾಂಕ 15.01.2005 ರಿಂದ 09.06.2006 ವರೆಗಿನ ಅವಧಿಗೆ ಬಡ್ಡಿ ಲೆಕ್ಕಾಚಾರ ಮಾಡಿ,ವಸೂಲಿಮಾಡಲು ಕ್ರಮ ತೆಗೆದುಕೊಳ್ಳುವುದು.

11)ನಾಗರೀಕ ಸೌಲಭ್ಯ ನಿವೇಶನದ ಹಂಚಿಕೆ ಪತ್ರ ಜಾರಿ ಮಾಡದೇ ಇರುವುದು:

ಕೆಂಪೇಗೌಡ ಫೌಂಡೇಷನ್ ಅಂಡ್ ಎಜುಕೇಷನಲ್ ಚಾರಿಟಬಲ್ ಟ್ರಸ್ಟ್, ತುಮಕೂರು ಇವರಿಗೆ ಸತ್ಯಮಂಗಲ ಗ್ರಾಮದ ಸರ್ವೆ ನಂ.43:3 ರಲ್ಲಿ 130 + 120 x 73 ಅಡಿ ಅಳತೆಯ ನಾಗರೀಕ ಸೌಲಭ್ಯದ ನಿವೇಶನ ಹಂಚಿಕೆಯಾಗಿದ್ದು, ನಿವೇಶನದ ಹಂಚಿಕೆಪತ್ರವನ್ನು ದಿನಾಂಕ 18-01-2008 ರಂದು ಹಂಚಿಕೆದಾರರಿಗೆ ಕಳುಹಿಸಿರುತ್ತಾರೆ. ಸದರಿ ನಿವೇಶನ ಹಂಚಿಕೆ ಪತ್ರ ಜಾರಿಯಾಗದೇ ದಿನಾಂಕ 21-01-2008 ರಂದು ವಾಪಸ್ ಬಂದಿದ್ದು, ಸದರಿ ಹಂಚಿಕೆ ಪತ್ರವನ್ನು ಕಡತದಲ್ಲಿ ಫೈಲ್ ಮಾಡಿರುತ್ತಾರೆ. ಸದರಿ ಸಂಸ್ಥೆಗೆ ನಾಗರೀಕ ಸೌಲಭ್ಯದ ನಿವೇಶನ ಹಂಚಿಕೆ ಪತ್ರವನ್ನು ಬಟವಾಡೆ ಮಾಡಲು ಕ್ರಮ ಪ್ರಾಧಿಕಾರದ ಆಡಳಿತವರ್ಗ ತೆಗೆದುಕೊಳ್ಳುವುದು.

12)ನಾಗರೀಕ ಸೌಕರ್ಯ ನಿವೇಶನಗಳ ಗುತ್ತಿಗೆ ಮೌಲ್ಯ ಹಾಗೂ ವಾರ್ಷಿಕ ಗುತ್ತಿಗೆ ಮೌಲ್ಯ ವಸೂಲಿ ಮಾಡದಿರುವುದು

ನಾಗರೀಕ ಸೌಕರ್ಯ ನಿವೇಶನಗಳ ಹಂಚಿಕೆ ಕಡತಗಳು ಹಾಗೂ ಗುತ್ತಿಗೆ ಕರಾರು ಮಾಡಿಕೊಂಡಿರುವ ಕಡತಗಳನ್ನು ಪರಿಶೀಲಿಸಲಾಗಿ ಕೆಳಕಂಡ ನಾಗರೀಕ ಸೌಕರ್ಯ ನಿವೇಶನಗಳ ಹಂಚಿಕೆದಾರರು/ ಗುತ್ತಿಗೆದಾರರು ಸಿ.ಎ. ನಿವೇಶನದ ಗುತ್ತಿಗೆ ಮೌಲ್ಯ ಹಾಗೂ ವಾರ್ಷಿಕ ಗುತ್ತಿಗೆ ಮೌಲ್ಯ ಪಾವತಿಸದೇ ಬಾಕಿ ಉಳಿಸಿಕೊಂಡಿರುತ್ತಾರೆ.

1) ಹೆಲನ್ ಕೆಲ್ಲರ್ ಇಂಟಿಗ್ರೇಟೆಡ್ ಎಜುಕೇಷನ್ ಸೊಸೈಟಿ (ರಿ.), ಸಿದ್ದರಾಮೇಶ್ವರ ಬಡಾವಣೆ, ತುಮಕೂರು ಇವರಿಗೆ ಶೆಟ್ಟಿಹಳ್ಳಿ ಗ್ರಾಮ ಸರ್ವೆ ನಂ.62:1 ರಲ್ಲಿ 113.3x7803 ಅಡಿ ಅಳತೆಯ ನಾಗರೀಕ ಸೌಕರ್ಯ ನಿವೇಶನ ಹಂಚಿಕೆಯಾಗಿರುತ್ತದೆ. ಸದರಿ ನಿವೇಶನವನ್ನು ಹಂಚಿಕೆದಾರರು ದಿನಾಂಕ 13-12-2002 ರಂದು ಗುತ್ತಿಗೆ ಕರಾರು ಮಾಡಿಸಿಕೊಂಡಿರುತ್ತಾರೆ.

ಅ)	ಸದರಿ ಸಂಸ್ಥೆಯು ಪಾವತಿಸಬೇಕಾದ ಗುತ್ತಿಗೆ ಮೌಲ್ಯ	236119.00
ಆ)	ಪಾವತಿಸಿರುವ ಮೊತ್ತ	105827.00
	ಬಾಕಿ ಮೊತ್ತ ರೂ.	130292.00

ಬಾಕಿ ಉಳಿದಿರುವ ಗುತ್ತಿಗೆ ಮೌಲ್ಯ 130292.00 ರೂ.ಗಳನ್ನು ಶೇ.12 ರ ಬಡ್ಡಿಯೊಂದಿಗೆ ಹಾಗೂ ಹೆಚ್ಚುವರಿ ಗುತ್ತಿಗೆ ಮೌಲ್ಯವನ್ನು ವಸೂಲಿ ಮಾಡಲು ಕ್ರಮ ತೆಗೆದುಕೊಳ್ಳುವುದು.

2) ತುಮಕೂರು ಜಿಲ್ಲಾ ನಿವೃತ್ತ ಪೋಲೀಸ್ ಅಧಿಕಾರಿಗಳ ಕ್ಷೇಮಾಭಿವೃದ್ಧಿ ಸಂಘ (ರಿ.), ತುಮಕೂರು ಇವರಿಗೆ ಗೆದ್ದಲಹಳ್ಳಿ ಗ್ರಾಮದ ಸರ್ವೆ ನಂ.44 ರಲ್ಲಿ 120+40x305 ಅಡಿ ಅಳತೆಯ ನಾಗರೀಕ ಸೌಲಭ್ಯದ ನಿವೇಶನವನ್ನು ದಿನಾಂಕ 07-05-2005 ರಂದು ಹಂಚಿಕೆ ಮಾಡಿರುತ್ತಾರೆ.

ಅ) ನಿವೇಶನಗಳ ಮೌಲ್ಯ ರೂ.	400992.00
ಆ) ಪಾವತಿಸಿರುವ ಮೊತ್ತ	375248.00
ಬಾಕಿ ಮೊತ್ತ ರೂ.	25744.00

ಸದರಿ ನಾಗರೀಕ ನಿವೇಶನದ ಗುತ್ತಿಗೆ ಮೌಲ್ಯ ಬಾಕಿ ಇರುವ ಮೊಬಲಗು 25744.00 ರೂ. ಹಾಗೂ ಸದರಿ ಸಂಸ್ಥೆಯವರು ವಿಳಂಬವಾಗಿ ಪಾವತಿಸಿರುವ ಹಣಕ್ಕೆ ಬಡ್ಡಿಯನ್ನು ಲೆಕ್ಕಾಚಾರ ಮಾಡಿ ವಸೂಲಿ ಮಾಡಲು ಕ್ರಮ ತೆಗೆದುಕೊಳ್ಳುವುದು.

3) ವಿನಾಯಕ ರೂರಲ್ ಡೆವಲಪ್‌ಮೆಂಟ್ ಸೊಸೈಟಿ (ರಿ.), ಕೆ.ಆರ್.ಬಡಾವಣೆ, ಮಧುಗಿರಿ ಇವರಿಗೆ ಮರಳೂರು ಗ್ರಾಮದ ಸರ್ವೆ ನಂ.9:1 ರಲ್ಲಿ 295x45 ಅಡಿ ಅಳತೆಯ ನಾಗರೀಕ ಸೌಲಭ್ಯದ ನಿವೇಶನವನ್ನು ಹಂಚಿಕೆ ಮಾಡಿದ್ದು ಗುತ್ತಿಗೆ ಕರಾರು ದಿನಾಂಕ 24-12-2006 ರಂದು ಮಾಡಿಕೊಂಡಿರುತ್ತಾರೆ. ಸದರಿ ಸಂಸ್ಥೆಯವರು ಗುತ್ತಿಗೆ ಕರಾರಿನ ಪ್ರಕಾರ ಪ್ರತಿ ವರ್ಷ ವಾರ್ಷಿಕ ಗುತ್ತಿಗೆ ಹಣ ಒಟ್ಟು 34526.00 ರೂ.ಗಳನ್ನು ಪಾವತಿಸಬೇಕಾಗಿರುತ್ತದೆ. ಸದರಿ ಸಂಸ್ಥೆಯು 24.12.2005 ರಂದು ಪ್ರತಿ ವರ್ಷ ವಾರ್ಷಿಕ ಗುತ್ತಿಗೆ ಹಣ 34596.00 ರೂ.ಗಳನ್ನು ಪಾವತಿಸಿರುವುದಿಲ್ಲ. ಸಂಬಂಧಿಸಿದ ಸಂಸ್ಥೆಯಿಂದ 24-12-2005 ರಿಂದ ಬರಬೇಕಾದ ವಾರ್ಷಿಕ ಗುತ್ತಿಗೆ ಹಣ ಹಾಗೂ ವಿಳಂಬ ಪಾವತಿಗೆ ಶೇ.12 ರಂತೆ ಬಡ್ಡಿ ಲೆಕ್ಕಾಚಾರ ಮಾಡಿ ವಸೂಲಿ ಮಾಡಲು ಕ್ರಮ ತೆಗೆದುಕೊಳ್ಳುವುದು.

13)ತುಮಕೂರು ನಗರಾಭಿವೃದ್ಧಿ ಪ್ರಾಧಿಕಾರ, ತುಮಕೂರು ನೌಗರೀಕ ಸೌಲಭ್ಯಗಳ ನಿವೇಶನದ ಹಂಚಿಕೆ ಬಗ್ಗೆ

2007-08 ನೇ ಸಾಲಿಗೆ ಲೆಕ್ಕತಪಾಸಣೆಗೆ ಹಾಜರುಪಡಿಸಿರುವ ಸಿ.ಎ. ಕಡತಗಳನ್ನು ಹಾಗೂ ಹಂಚಿಕೆಯಾಗಿರುವ ಪಟ್ಟಿಯನ್ನು ಪರಿಶೀಲಿಸಲಾಗಿ ದಿನಾಂಕ 31-03-2008 ರ ಅಂತ್ಯಕ್ಕೆ ಸಿ.ಎ. ನಿವೇಶನಗಳ ಹಂಚಿಕೆದಾರರಿಂದ ಒಟ್ಟು ಗುತ್ತಿಗೆ ಮೌಲ್ಯ 11168326.00 + ಬಡ್ಡಿ ಬಾಕಿ ಇರುತ್ತದೆ. ಆದರೆ ಸಿ.ಎ. ನಿವೇಶನಗಳ ಹಂಚಿಕೆದಾರರ ಗುತ್ತಿಗೆ ಮೌಲ್ಯ ಪಾವತಿಗೆ ಸಂಬಂಧಿಸಿದಂತೆ ತಗಾದೆ ವಹಿಯನ್ನು ನಿರ್ವಹಿಸಿರುವುದಿಲ್ಲ. ಸಿ.ಎ. ನಿವೇಶನಗಳ ಗುತ್ತಿಗೆ ಮೌಲ್ಯದ ಬೇಡಿಕೆ, ವಸೂಲಿ ಹಾಗೂ ಬಾಕಿಯ ವಿವರಗಳನ್ನು ನಮೂದಿಸಿ, ಮುಂದಿನ ಲೆಕ್ಕ ತಪಾಸಣೆಗೆ ಹಾಜರುಪಡಿಸಲು ಸೂಚಿಸಿದೆ.

ಪಾವತಿಯ ಬಿಲ್ಲುಗಳ ಪರಿಶೀಲನೆ

14) ವೃತ್ತಿತೆರಿಗೆ ಕಡಿಮೆ ಕಟಾಯಿಸಿರುವುದು:

2007-08 ನೇ ಸಾಲಿಗೆ ವೇತನ ಬಟವಾಡೆ ವಹಿಯನ್ನು ಪರಿಶೀಲಿಸಲಾಗಿ ಕೆಳಕಂಡ ನೌಕರರುಗಳ ವೇತನದಲ್ಲಿ ವೃತ್ತಿ ತೆರಿಗೆ ಕಡಿಮೆ ಕಟಾಯಿಸಲಾಗಿದೆ. ವಿವರ ಈ ಕೆಳಕಂಡಂತೆ ಇರುತ್ತದೆ.

ಕ್ರ ಸಂ	ನೌಕರರ ಹೆಸರು	ಪದನಾಮ	ಒಟ್ಟು ವೇತನ	ಕಟಾಯಿಸ ಬೇಕಾದ ವೃತ್ತಿತೆರಿಗೆ	ಕಟಾಯಿಸಿ ರುವ ವೃತ್ತಿತೆರಿಗೆ	ವ್ಯತ್ಯಾಸ	ಅವಧಿ	ಕಡಿಮೆ ಕಟಾಯಿಸಿ ರುವ ಅವಧಿ	ಕಡಿಮೆ ಕಟಾಯಿಸಿ ರುವ ಮೊತ್ತ
1	2	3	4	5	6	7	8	9	10
1	ಲಕ್ಷ್ಮೀಪತಿ	ಕಯೋಸ	17244	200	150	50	8:07 2:08	7	350
2	ಬೇಟೆರಂಗಯ್ಯ	ಪ್ರದಸ	11521	150	100	50	3:07 7:07	5	250
3	ಶ್ರೀನಿವಾಸಯ್ಯ	ದ್ವಿದಸ	8760	100	60	40	3:03 5:07	3	120
				50	60	20	6:07 2:08	9	810

4	ಆರ್.ವಾಣಿ	ದ್ವಿದಸ	8168	100	60	40	6:07 2:08	9	360
5	ಹೆಚ್.ಎಸ್. ರಾಘವೇಂದ್ರ	ಬೆಅಗಾ	8860	150	60	90	6:07 2:08	9	810
6	ಮೂಡಲಗಿರಯ್ಯ	ನಿನಯಂನಿ	8168	100	60	40	6:07 2:08	9	360
7	ಪಾಂಡುರಂಗಯ್ಯ ಟಿ.	ವಾ.ಚಾ	8453	100	60	40	6:07 2:08	9	360
8	ಟಿ.ತಿಮ್ಮರಾಜು	ವಾ.ಚಾ.	8378	100	60	40	6:07 2:08	9	360
9	ರಾಮಮೂರ್ತಿ	ಗ್ರೂಪ್‌ಡಿ	5783	60	30	30	3:07 2:08	12	360
10	ಸರ್ವಮಂಗಳ	ಗ್ರೂಪ್‌ಡಿ	5783	60	30	30	3:07 2:08	12	360
11	ಟಿ.ಜಿ.ಬಸವರಾಜು	ಗ್ರೂಪ್‌ಡಿ	8538	100	60	40	6:07 2:08	9	360
12	ಚಿಕ್ಕರಂಗಯ್ಯ	ಕಾವಲುಗಾರ	4350	30	--	30	3:07 2:08	12	360
							ಒಟ್ಟು ರೂ.		5340

2007-08 ನೇ ಸಾಲಿನಲ್ಲಿ ಕಡಿಮೆ ಕಟಾಯಿಸಿರುವ ವೃತ್ತಿ ತೆರಿಗೆ ಮೊತ್ತ 5340.00 ರೂ.ಗಳನ್ನು ಮೇಲ್ಕಂಡ ಸಂಬಂಧಿಸಿದ ನೌಕರರುಗಳಿಂದ ವಸೂಲಿ ಮಾಡಿ ಸಂಬಂಧಿಸಿದ ಲೆಕ್ಕ ಶೀರ್ಷಿಕೆಗೆ ಜಮಾ ಮಾಡಲು ಕ್ರಮ ತೆಗೆದುಕೊಳ್ಳುವುದು.

15) ಬಿಲ್ಲಿನಲ್ಲಿ ಆದಾಯ ತೆರಿಗೆ ಕಡಿಮೆ ಕಟಾಯಿಸಿರುವುದು

2007-08 ನೇ ಸಾಲಿನಲ್ಲಿ ಪ್ರಾಧಿಕಾರದ ನಿಧಿಯಿಂದ ಕೆಳಕಂಡ ಚೆಕ್ಕುಗಳಲ್ಲಿ ಸ್ಪೆಕ್ಟ್ರಾ ಅಸೋಸಿಯೇಟ್ಸ್, ತುಮಕೂರು ಇವರಿಗೆ ಅಮಾನಿಕೆರೆ ಹಾಗೂ ದಿಬ್ಬೂರು ಲೇಔಟಿನ ಡಿಜಿಟಲ್ ನಕ್ಷೆ ತಯಾರಿಸಿದ ಬಾಬ್ತು ಬಿಲ್ಲನ್ನು ಪಾವತಿಸಿರುತ್ತಾರೆ.

1)	147768 ದಿನಾಂಕ 10-08-2007	167880-00
2)	147807 ದಿನಾಂಕ 27-10-2007	50381-00
	ಒಟ್ಟು ರೂ.	**213261-00**

ಮೇಲ್ಕಂಡ ಪಾವತಿಯ ಬಿಲ್ಲು ಪರಿಶೀಲಿಸಿದಾಗ ಆದಾಯ ತೆರಿಗೆ ಕಾಯಿದೆ ಸೆಕ್ಷನ್ 194ಜೆ ಪ್ರಕಾರ ತಾಂತ್ರಿಕ ಸೇವೆಯ ಬಿಲ್ಲುಗಳಿಗೆ ಶೇ.5 ರಷ್ಟು ಆದಾಯ ತೆರಿಗೆ + ಸರ್‌ಚಾರ್ಜ್ ಕಟಾಯಿಸಬೇಕು. ಆದರೆ ಮೇಲ್ಕಂಡ ಬಿಲ್ಲಿನಲ್ಲಿ ಆದಾಯ ತೆರಿಗೆ ಕಡಿಮೆ ಕಟಾಯಿಸಿರುತ್ತಾರೆ.

1)	ಕಟಾಯಿಸಬೇಕಾದ ಆದಾಯ ತೆರಿಗೆ	11462-00
2)	ಮೇಲ್ಕಂಡ ಬಿಲ್ಲಿನಲ್ಲಿ ಕಟಾಯಿಸಿರುವ ಆದಾಯ ತೆರಿಗೆ	5060-00
3)	**ಆದಾಯ ತೆರಿಗೆ ಕಡಿಮೆ ಕಟಾಯಿಸಿರುವುದು**	**6402-00**

ಮೇಲ್ಕಂಡ ತಾಂತ್ರಿಕ ಸೇವೆಯ ಬಿಲ್ಲಿನಲ್ಲಿ ಕಡಿಮೆ ಕಟಾಯಿಸಿರುವ ಆದಾಯ ತೆರಿಗೆ 6402-00 ರೂ.ಗಳನ್ನು ಸಂಬಂಧಿಸಿದವರಿಂದ ವಸೂಲಿ ಮಾಡಿ ಸರ್ಕಾರದ ಆದಾಯ ತೆರಿಗೆ ಇಲಾಖೆಗೆ ಜಮಾ ಮಾಡಲು ಕ್ರಮ ತೆಗೆದುಕೊಳ್ಳುವುದು.

16)ಜಾಹೀರಾತು ಬಿಲ್ಲುಗಳ ಪಾವತಿಯಲ್ಲಿ ಆದಾಯ ತೆರಿಗೆ ಕಟಾಯಿಸದೇ ಇರುವುದು:

2007-08 ನೇ ಸಾಲಿನಲ್ಲಿ ಶ್ರೀ ಸಿ.ಜಿ.ಹೃಷಿಕೇಶ್‌ರವರಿಗೆ ಪ್ರಾಧಿಕಾರದ ನಿಧಿಯ ಚೆಕ್ ಸಂಖ್ಯೆ 92693 ದಿನಾಂಕ 18.07.2007 ರಲ್ಲಿ 24360.00 ರೂ.ಗಳನ್ನು ಡೆಕ್ಕನ್ ಹೆರಾಲ್ಡ್ ಪತ್ರಿಕೆಯ ಜಾಹೀರಾತು ಬಿಲ್ಲನ್ನು ಪಾವತಿಸಿರುತ್ತಾರೆ. ಪಾವತಿಗೆ ಸಂಬಂಧಿಸಿದ ಬಿಲ್ಲನ್ನು ಪರಿಶೀಲಿಸಲಾಗಿ ಆದಾಯ ತೆರಿಗೆ ಕಾಯಿದೆ ಸೆಕ್ಷನ್ 194ಸಿ(2) ರ ಅನ್ವಯ ಶೇ.1 ರಷ್ಟು ಆದಾಯ ತೆರಿಗೆ ಕಟಾಯಿಸಿರುವುದಿಲ್ಲ. ಆದ್ದರಿಂದ ಸಂಬಂಧಿಸಿದ ಸಂಸ್ಥೆಯಿಂದ ಆದಾಯ ತೆರಿಗೆ ಒಟ್ಟು 244.00 ರೂ.ಗಳನ್ನು ವಸೂಲಿ ಮಾಡಿ, ಸರ್ಕಾರದ ಸಂಬಂಧಿಸಿದ ಲೆಕ್ಕ ಶೀರ್ಷಿಕೆಗೆ ಜಮಾ ಮಾಡಲು ಸೂಚಿಸಿದೆ.

17)ಕಾಮಗಾರಿ ಬಿಲ್ಲುಗಳಲ್ಲಿ ಆದಾಯ ತೆರಿಗೆ ಕಡಿಮೆ ಕಟಾಯಿಸಿರುವುದು

2007-08 ನೇ ಸಾಲಿನಲ್ಲಿ ಪ್ರಾಧಿಕಾರದ ನಿಧಿಯಿಂದ ಪಾವತಿಸಲಾದ ಕಾಮಗಾರಿ ಬಿಲ್ಲುಗಳನ್ನು ಪರಿಶೀಲಿಸಿದಾಗ ಕಾಮಗಾರಿಗಳಲ್ಲಿ ಶೇ.2 ರಷ್ಟು ಮಾತ್ರ ಆದಾಯ ತೆರಿಗೆಯನ್ನು ಕಟಾಯಿಸಿರುತ್ತಾರೆ. ಕಾಮಗಾರಿ ಬಿಲ್ಲುಗಳಲ್ಲಿ ಆದಾಯ ತೆರಿಗೆ

ಹಾಗೂ ಸರ್‌ಚಾರ್ಜ್ ಸೇರಿದಂತೆ ಶೇ.2.25 ರಷ್ಟು ಕಟಾಯಿಸಬೇಕಾಗಿರುತ್ತದೆ. ಆದರೆ 2007-08 ನೇ ಸಾಲಿನಲ್ಲಿ ಕಾಮಗಾರಿ ಬಿಲ್ಲುಗಳಲ್ಲಿ ಕಡಿಮೆ ಕಟಾಯಿಸಿರುವ ಆದಾಯ ತೆರಿಗೆಯ ವಿವರವನ್ನು ಅನುಬಂಧ-5 ರ ಕಾಲಂ 19ರಿಂದ 21 ರವರೆಗೆ ವಿವರಿಸಿದೆ. 2007-08 ನೇ ಸಾಲಿನಲ್ಲಿ ಕಾಮಗಾರಿ ಬಿಲ್ಲುಗಳಲ್ಲಿ ಕಡಿಮೆ ಕಟಾಯಿಸಿರುವ ಆದಾಯ ತೆರಿಗೆ 5606.00 ರೂ.ಗಳನ್ನು ಸಂಬಂಧಿಸಿದ ಗುತ್ತಿಗೆದಾರರಿಂದ ವಸೂಲಿ ಮಾಡಿ ಸರ್ಕಾರದ ಸಂಬಂಧಿಸಿದ ಲೆಕ್ಕಶೀರ್ಷಿಕೆಗೆ ಜಮಾ ಮಾಡಲು ಕ್ರಮ ತೆಗೆದುಕೊಳ್ಳುವುದು.

18) ಎನ್.ಜಿ.ಸಿ. ಶುಲ್ಕ ನಿಗದಿಪಡಿಸಿಕೊಂಡಿರುವ ಬಗ್ಗೆ

ನಗರಾಭಿವೃದ್ಧಿ ಪ್ರಾಧಿಕಾರ, ತುಮಕೂರು ಇವರು 2007-08ನೇ ಸಾಲಿನ ಭೂಪರಿವರ್ತನಾ ಶುಲ್ಕ ನಿಗದಿಪಡಿಸಿರುವುದನ್ನು ಪರಿಶೀಲಿಸಲಾಗಿ ಎಕರೆ ಒಂದಕ್ಕೆ 1000.00 ರೂ., 5 ಗುಂಟೆವರೆಗೆ 100.00 ರೂ. ಕಟ್ಟಿಸಿಕೊಂಡು ಭೂಪರಿವರ್ತನೆ ಮಾಡುತ್ತಿರುವುದು ಕಂಡುಬಂದಿರುತ್ತದೆ. ಪ್ರಾಧಿಕಾರದ ಖರ್ಚು ದಿನೇ ದಿನೇ ಗಣನೀಯವಾಗಿ ಹೆಚ್ಚುತ್ತಿದ್ದು, ಸಂಪನ್ಮೂಲಗಳನ್ನು ಕ್ರೋಢೀಕರಿಸಿಕೊಳ್ಳಬೇಕಾಗಿರುವುದರಿಂದ ಪ್ರಾಧಿಕಾರಕ್ಕೆ ದಿನಂಪ್ರತಿ ಸಲ್ಲಿಸುವ ಪ್ರಾರಂಭಿಕ ಪತ್ರಗಳು, ಲೇಔಟ್‌ಗಳು, ಎನ್.ಓ.ಸಿ. ಗಳು ಹಾಗೂ ಇತರೆ ಅರ್ಜಿಗಳ ಮೇಲೆ ಪರಿಶೀಲನಾ ಶುಲ್ಕವನ್ನು ಮರು ನಿಗಧಿಪಡಿಸಿಕೊಳ್ಳಲು ಆಡಳಿತವರ್ಗ ಕ್ರಮ ಕೈಗೊಳ್ಳಲು ಸೂಚಿಸಿದೆ.

19) ತುಮಕೂರು ಅಮಾನಿಕೆರೆ ಸಮಗ್ರ ಅಭಿವೃದ್ಧಿ ಸರ್ವೆ ಕಾರ್ಯಕ್ಕೆ ಪಾವತಿಸಿರುವ ಹಣಕ್ಕೆ ಸಂದಾಯ ರಸೀದಿ ಹಾಜರುಪಡಿಸದಿರುವ ಬಗ್ಗೆ

2007-08ನೇ ಸಾಲಿನ ತುಮಕೂರು ಅಮಾನಿಕೆರೆ ಸಮಗ್ರ ಅಭಿವೃದ್ಧಿ ಸರ್ವೆ ಕಾರ್ಯಕ್ಕೆ ಮೆ|| ಮೋಸ್ ಟೆಕ್ನೋಸ್ಪಾಟ್ಸ್ ಪ್ರೈವೇಟ್ ಲಿಮಿಟೆಡ್, ಬೆಂಗಳೂರು ರವರಿಗೆ ಚೆಕ್ ಸಂಖ್ಯೆ 814771 ದಿನಾಂಕ 15-12-2007 ರಲ್ಲಿ 561800.00 ರೂ. ಗಳನ್ನು ಪಾವತಿಸಿರುವುದಕ್ಕೆ ಹಣಸಂದಾಯ ರಸೀದಿ ಹಾಜರುಪಡಿಸಿರುವುದಿಲ್ಲ. ಹಾಜರುಪಡಿಸುವವರೆಗೆ ಪಾವತಿಸಿರುವ 808992.00 ರೂ.ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ. ಹಾಗೂ ಆದಾಯ ತೆರಿಗೆ 40450.00 ರೂ.ಗಳನ್ನು ವಸೂಲಾತಿಗೆ ಸೂಚಿಸಿದೆ.

20) ಸಾಮಗ್ರಿ ಸರಬರಾಜುದಾರರ ಬಿಲ್ಲುಗಳಲ್ಲಿ ಆದಾಯ ತೆರಿಗೆ ಕಟಾಯಿಸದಿರುವುದು:

2007-08 ನೇ ಸಾಲಿನಲ್ಲಿ ಕಾಪಿಯರ್ ಟೆಕ್ನೋಸಿಸ್ಟಂ, ಬೆಂಗಳೂರು ರವರು ಕಾಪಿಯರ್ ಯಂತ್ರವನ್ನು ಸರಬರಾಜು ಮಾಡಿರುವುದು ಕಂಡುಬಂದಿರುತ್ತದೆ. ಸದರಿ ಬಿಲ್ಲುಗಳಲ್ಲಿ ಈ ಕೆಳಕಂಡಂತೆ ಆದಾಯ ತೆರಿಗೆ ಕಟಾಯಿಸಬೇಕಾಗಿರುತ್ತದೆ. ವಿವರ ಕೆಳಕಂಡಂತೆ ಇರುತ್ತದೆ.

ಕ್ರ.ಸಂ.	ಚೆಕ್ ಸಂಖ್ಯೆ, ದಿನಾಂಕ	ಪಾವತಿಸಿದ ಮೊತ್ತ	ಆದಾಯ ತೆರಿಗೆ
1	215453 : 15-12-2007	60112-00	1352-00
2	215478 : 02-01-2008	20280-00	457-00
		ಒಟ್ಟು ರೂ.	**1809-00**

ಕಾಪಿಯರ್ ಟೆಕ್ನೋಸಿಸ್ಟಂ, ಬೆಂಗಳೂರು ರವರಿಂದ 1809-00 ರೂ. ಆದಾಯ ತೆರಿಗೆಯನ್ನು ವಸೂಲಿಸಿ, ಸಂಬಂಧಪಟ್ಟ ಲೆಕ್ಕಶೀರ್ಷಿಕೆಗೆ ಜಮಾ ಮಾಡಲು ಕ್ರಮ ಕೈಗೊಳ್ಳಲು ಸೂಚಿಸಿದೆ. ಸದರಿ ಮೊಬಲಗನ್ನು ವಸೂಲಾತಿಗೆ ಸೂಚಿಸಿದೆ.

21) ಕಾಮಗಾರಿಯ ಗುತ್ತಿಗೆದಾರರ ಬಿಲ್ಲುಗಳಲ್ಲಿ ಹೆಚ್ಚಿಗೆ ಪಾವತಿಸಿರುವ ಬಗ್ಗೆ:

2007-08 ನೇ ಸಾಲಿನ ಕಾಮಗಾರಿಯ ಗುತ್ತಿಗೆದಾರರ ಬಿಲ್ಲುಗಳಲ್ಲಿ ಈ ಕೆಳಕಂಡಂತೆ ಹೆಚ್ಚಿಗೆ ಪಾವತಿಸಿರುವುದು ಕಂಡುಬಂದಿರುತ್ತೆ. ಮೆ|| ಷರೂನ್ ಎಂಟರ್‌ಪ್ರೈಸಸ್, ತುಮಕೂರು ರವರಿಗೆ ಶೆಟ್ಟಿಹಳ್ಳಿ ವಸತಿ ಯೋಜನೆ ರಸ್ತೆ ಸಂಖ್ಯೆ 9ರ ಅಭಿವೃದ್ಧಿ ಕಾಮಗಾರಿಯ ಬಿಲ್ಲಿನಲ್ಲಿ ಪಾವತಿಸಬೇಕಾದ ಮೊತ್ತ 105394.00 ಆದರೆ, ಪಾವತಿಸಿರುವುದು 107069-00 ರೂ. ಗಳನ್ನು ಚೆಕ್ ಸಂಖ್ಯೆ 814794 ದಿನಾಂಕ 22-01-2008 ರ ಮುಖಾಂತರ. ಅಲ್ಲಿಗೆ ಹೆಚ್ಚಿಗೆ ಪಾವತಿಸಿರುವ ಮೊತ್ತ 1675.00 ರೂ.ಗಳನ್ನು ಸಂಬಂಧಪಟ್ಟ ಗುತ್ತಿಗೆದಾರರಿಂದ ವಸೂಲಿಸಿ ಸಂಬಂಧಪಟ್ಟ ಲೆಕ್ಕಶೀರ್ಷಿಕೆಗೆ ಜಮಾ ಮಾಡಲು ಆಡಳಿತ ವರ್ಗ ಕ್ರಮ ಕೈಗೊಳ್ಳಲು ಸೂಚಿಸಿದೆ.

22)ಅಕ್ಟೋಬರ್ 2007 ರಿಂದ ಮಾರ್ಚ್ 2008 ರವರೆಗಿನ ಕಾಮಗಾರಿ ಬಿಲ್ಲುಗಳ ಬಗ್ಗೆ

10:2007 ರಿಂದ 3:2008 ರವರೆಗೆ ಕಾಮಗಾರಿ ಬಿಲ್ಲುಗಳ ವಿವರವನ್ನು ಅನುಬಂಧ-6 ರಲ್ಲಿ ನಮೂದಿಸಿ ವರದಿಗೆ ಲಗತ್ತಿಸಿರುತ್ತೆ. ಈ ಬಿಲ್ಲುಗಳಲ್ಲಿ ಕಟಾಯಿಸಿರುವ ತೆರಿಗೆಗಳ ವಿವರ ಈ ಕೆಳಕಂಡಂತೆ ಇರುತ್ತದೆ.

1) ರಾಜಧನ 42667-00
2) ಮಾರಾಟ ತೆರಿಗೆ 130894-00
3) ಆದಾಯ ತೆರಿಗೆ 71393-00

ಮೇಲಿನ ಎಲ್ಲಾ ತೆರಿಗೆಗಳನ್ನು ಸಂಬಂಧಪಟ್ಟ ಲೆಕ್ಕ ಶೀರ್ಷಿಕೆಗೆ ಜಮಾ ಮಾಡಲಾಗಿದೆ. ವಿವರ ಅನುಬಂಧ-6 ರಲ್ಲಿ ಸೂಚಿಸಿದೆ.

ಭಾಗ-6

23) ಎ.ಡಿ.ಬಿ. ಯೋಜನೆಯ ಆರ್ಥಿಕ ಪರಿಸ್ಥಿತಿ

2007-08 ನೇ ಸಾಲಿನ ಎ.ಡಿ.ಬಿ. ಯೋಜನೆಯ ಆರ್ಥಿಕ ಪರಿಸ್ಥಿತಿ ಈ ಕೆಳಕಂಡಂತೆ ಇರುತ್ತದೆ.

01-04-2007 ಕ್ಕೆ ಪ್ರಾರಂಭ ಶಿಲ್ಕು	27495830-00
2007-08 ನೇ ಸಾಲಿಗೆ ಜಮಾ	70067400-00
ಒಟ್ಟು ರೂ.	**97563230-00**
2007-08 ಕ್ಕೆ ಖರ್ಚು	57851688-00
31.03.2008 ಕ್ಕೆ ಅಂತಿಮ ಶಿಲ್ಕು	9711542-00

ನಗದು ಪುಸ್ತಕ ಮತ್ತು ಬ್ಯಾಂಕ್ ಪಾಸ್ ಪುಸ್ತಕಗಳಲ್ಲಿನ ವ್ಯತ್ಯಾಸದ ಮೊತ್ತದ ಬಗ್ಗೆ ವಿವರವನ್ನು ಅನುಬಂಧ-7 ರಲ್ಲಿ ನೀಡಿದೆ. ಅನುಬಂಧದಲ್ಲಿ ಈ ಯೋಜನೆಯಲ್ಲಿನ 31-03-2008 ಕ್ಕೆ ನಗದಾಗದೆ ಇರುವ ಚೆಕ್ಕುಗಳ ವಿವರಗಳನ್ನು ನೀಡಿದ್ದು, ಈ ಮೊತ್ತ 1305532-00 ರೂ.ಗಳಾಗಿರುತ್ತದೆ.

ಜಮಾ ಮತ್ತು ಖರ್ಚಿನ ವಿವರವನ್ನು ಅನುಬಂಧ-7 ರಲ್ಲಿ ವಿವರಿಸಿ ವರದಿಯೊಂದಿಗೆ ಅಡಕವಿರಿಸಿದೆ.

ಎ.ಡಿ.ಬಿ. ಯೋಜನೆಯ ಆರ್ಥಿಕ ವ್ಯವಹಾರವನ್ನು 9 ಬ್ಯಾಂಕುಗಳಲ್ಲಿ ನಿರ್ವಹಿಸಲಾಗಿದ್ದು ಇದರಿಂದಾಗಿ ಸಮರ್ಪಕವಾದ ಜಮಾ-ಖರ್ಚಿನ ವ್ಯವಹಾರವನ್ನು ನಿರ್ವಹಿಸಲು ತೊಂದರೆಯಾಗುವುದರಿಂದ ಸರ್ಕಾರದ ಆದೇಶದ ಮತ್ತು ಸೂಚನೆಯಂತೆ ಒಂದೇ ಬ್ಯಾಂಕಿನಲ್ಲಿ, ಒಂದೇ ಖಾತೆಯಲ್ಲಿ ವ್ಯವಹರಿಸಲು ಕ್ರಮ ತೆಗೆದುಕೊಳ್ಳಲು ಹಿಂದಿನ ಲೆಕ್ಕ ತನಿಖಾ ವರದಿಗಳಲ್ಲಿ ಸೂಚನೆ ನೀಡಿದೆ. ಆದಾಗ್ಯೂ ಕೂಡ ಕ್ರಮತೆಗೆದುಕೊಳ್ಳದೆ ಸದರಿ ಸಾಲಿನಲ್ಲಿಯೂ ಕೂಡ ಹಲವಾರು ಬ್ಯಾಂಕುಗಳಲ್ಲಿ (9 ಬ್ಯಾಂಕು ಗಳಲ್ಲಿ) ಆರ್ಥಿಕ ವ್ಯವಹಾರವನ್ನು ನಡೆಸಲಾಗಿರುತ್ತದೆ. ಈ ಬಗ್ಗೆ ಆಯುಕ್ತರು ವಿವರಣೆಯನ್ನು ಲೆಕ್ಕ ತನಿಖೆಗೆ ನೀಡಲು ಸೂಚಿಸಿದೆ.

24) ಕಾಮಗಾರಿ ಬಿಲ್‌ನಲ್ಲಿ ಹೆಚ್ಚುವರಿ ಹಣ ಪಾವತಿಸಿರುವ ಬಗ್ಗೆ

ಮೇಳೇಕೋಟೆ ವೀರಸಾಗರ ವಸತಿ ಬಡಾವಣೆ ಡಿ-46 ರ ರಸ್ತೆ ನಿರ್ಮಾಣ ಕಾಮಗಾರಿಯನ್ನು ಶ್ರೀ ರಮಣ ರೆಡ್ಡಿ, ಗುತ್ತಿಗೆದಾರರಿಂದ ಅನುಷ್ಠಾನಗೊಳಿಸಿದ್ದು 2ನೇ ಭಾಗದ ಬಿಲ್ ಹಣವನ್ನು ಪಾವತಿಸುವಲ್ಲಿ 4505-00 ರೂ.ಗಳನ್ನು ಹೆಚ್ಚುವರಿಯಾಗಿ ಪಾವತಿಸಿರುವುದು ಕಂಡುಬಂದಿದೆ.

ಕ್ರ ಸಂ	ಪಾವತಿಸಿದ ಮೊತ್ತ	ಪಾವತಿಸಬೇಕಾದ ಮೊತ್ತ	ಹೆಚ್ಚುವರಿ ಪಾವತಿ	ಅಳತೆ ಪುಸ್ತಕ ಸಂಖ್ಯೆ ಹಾಗೂ ಪುಟಸಂಖ್ಯೆ
1	77152-00	72647-00	4505-00	9460: 55-63 144771: 23-01-08 ಚೆಕ್ಕು

ಈ ಮೇಲಿನಂತೆ ಹೆಚ್ಚುವರಿ ಪಾವತಿಸಿರುವ ಮೊತ್ತ 4505.00 ರೂ.ಗಳನ್ನು ಗುತ್ತಿಗೆದಾರರಿಂದ ವಸೂಲಿ ಮಾಡಿ ಎ.ಡಿ.ಬಿ. ಯೋಜನೆ ಖಾತೆಗೆ ಜಮಾ ಮಾಡಿ ಮಾಹಿತಿ ನೀಡಲು ಸೂಚಿಸಿದೆ.

25) ಕಾಮಗಾರಿ ಬಿಲ್‌ಗಳ ವೆಚ್ಚಕ್ಕೆ ಸಂಬಂಧಿಸಿದ ಕಡತಗಳನ್ನು ಹಾಜರುಪಡಿಸದಿರುವುದು:

2007-08 ನೇ ಸಾಲಿನಲ್ಲಿ ಸಾಮಾನ್ಯ ನಗದು ಪುಸ್ತಕದ ಪ್ರಕಾರ ಈ ಕೆಳಕಂಡಂತೆ ಗುತ್ತಿಗೆದಾರರಿಗೆ ಚೆಕ್ ಮುಖೇನ ಹಣ ಪಾವತಿಸಲಾಗಿದ್ದು ಈ ವೆಚ್ಚಕ್ಕೆ ಸಂಬಂಧಿಸಿದಂತೆ ಕಾಮಗಾರಿ ಬಿಲ್‌ಗಳನ್ನು ಹಾಗೂ ಕಡತಗಳನ್ನು ಲೆಕ್ಕ ತನಿಖೆಗೆ ಹಾಜರುಪಡಿಸಿರುವುದಿಲ್ಲ.

ಕ್ರಮ ಸಂಖ್ಯೆ	ಗುತ್ತಿಗೆದಾರರ ಹೆಸರು	ಚೆಕ್ ಸಂಖ್ಯೆ : ದಿನಾಂಕ	ಮೊತ್ತ
1	ಶ್ರೀ ಜಿ.ಎನ್.ಗಂಗರಾಜು	144708 : 2-6-2007	320455-00
2	ಶ್ರೀ ಕೆ.ಸುರೇಶ್ ಬಾಬು	144760 : 29-11-2007	123042-00
3	ಶ್ರೀ ಕೆ.ವಿ.ಶ್ರೀನಿವಾಸ್	144768 : 02-01-2008	387578-00
4	ಶ್ರೀ ಕೆ.ವಿ.ಶ್ರೀನಿವಾಸ್	144787 : 25-02-2008	105694-00
		ಒಟ್ಟು ರೂ.	**936769-00**

ಈ ಮೇಲಿನ ಪಾವತಿಗೆ ಸಂಬಂಧಿಸಿದಂತೆ ಕಾಮಗಾರಿ ಬಿಲ್‌ಗಳು, ಅಂದಾಜು ಪಟ್ಟಿ, ಕಡತ ಮತ್ತು ಇತರೆ ದಾಖಲೆಗಳನ್ನು ಲೆಕ್ಕ ತನಿಖೆಗೆ ಹಾಜರುಪಡಿಸುವವರೆಗೆ 936769-00 ರೂ.ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.

26)ಎ.ಡಿ.ಬಿ. ಯೋಜನೆಯಡಿಯ ಸಾಲದ ಮರುಪಾವತಿ ಬಗ್ಗೆ:

2007-08 ನೇ ಸಾಲಿನಲ್ಲಿ ಕರ್ನಾಟಕ ನಗರ ಮೂಲ ಸೌಕರ್ಯ ಅಭಿವೃದ್ಧಿ ಹಾಗೂ ಹಣಕಾಸು ಸಂಸ್ಥೆ, ಬೆಂಗಳೂರು ಇವರಿಗೆ ನೆರವಿನ ಸಾಲ ಪಡೆದಿರುವ ಸಂಬಂಧ ಈ ಕೆಳಕಂಡಂತೆ (ಮ್ಯಾನೇಜಿಂಗ್ ಡೈರೆಕ್ಟರ್, ಕರ್ನಾಟಕ ನಗರ ಮೂಲ ಸೌಕರ್ಯ ಅಭಿವೃದ್ಧಿ ಸಂಸ್ಥೆ, ಬೆಂಗಳೂರು) ರವರಿಗೆ ಸಾಲದ ಹಣವನ್ನು ಮರುಪಾವತಿ ಮಾಡಿರುವುದು ಕಂಡುಬಂದಿದೆ.

1) ಚೆಕ್ ಸಂಖ್ಯೆ ದಿನಾಂಕ 03-08-2007	2000000-00
2) ಚೆಕ್ ಸಂಖ್ಯೆ ದಿನಾಂಕ 31-03-2008	46690808-00
ಒಟ್ಟು ರೂ.	**66690808-00**

ಈ ಬಗ್ಗೆ ಕೆ.ಯು.ಐ.ಡಿ.ಎಫ್.ಸಿ., ಬೆಂಗಳೂರು ಸಂಸ್ಥೆಯಿಂದ ಪಡೆದಿರುವ ಒಟ್ಟು ಸಾಲದ ಹಣ, ಅದರ ಬಡ್ಡಿ ಇವರಿಗೆ ಮರುಪಾವತಿ ಮಾಡಿರುವ ಬಗ್ಗೆ ವಿವರಗಳ ದಾಖಲೆಗಳು ಸಾಲದ ವಹಿಯನ್ನು ಮತ್ತು ಕಡತವನ್ನು ಲೆಕ್ಕತನಿಖೆಗೆ ಹಾಜರು ಪಡಿಸಿರುವುದಿಲ್ಲ. ಇದರಿಂದಾಗಿ ಎ.ಡಿ,ಬಿ. ಯೋಜನೆಯಡಿ ಸಾಲದ ಪೂರ್ಣ ವಿವರಗಳನ್ನು ತಿಳಿಯಲು ಲೆಕ್ಕ ತನಿಖೆಗೆ ಸಾಧ್ಯವಾಗಿರುವುದಿಲ್ಲ. ಈ ಬಗ್ಗೆ ಆಯುಕ್ತರು ರವರ ವಿವರಣೆ ಅಗತ್ಯವಿದೆ.

27)ಎ.ಡಿ.ಬಿ. ಯೋಜನೆಗಳಡಿಯಲ್ಲಿನ ಹೂಡಿಕೆಗಳ ಬಗ್ಗೆ

2007-08 ನೇ ಸಾಲಿಗೆ ಸಂಬಂಧಪಟ್ಟಂತೆ ಹೂಡಿಕೆಗಳ ವಹಿಯನ್ನು ಪರಿಶೀಲಿಸಲಾಗಿ ಸದರಿ ಸಾಲಿನ ಹಿಂದೆ ಇದ್ದಂತೆ ಹೂಡಿಕೆಗಳನ್ನು ನವೀಕರಣ ಮತ್ತು ನಗದೀಕರಣಗೊಳಿಸಿದ್ದಲ್ಲಿ ವಿವರ ಈ ಕೆಳಕಂಡಂತೆ ಇರುತ್ತದೆ.

ಕ್ರಮ ಸಂಖ್ಯೆ	ಹೂಡಿಕೆಯ ಮೊತ್ತ	ನಗದೀಕರವಾದ ಮೊತ್ತ	ದಿನಾಂಕ	ನಗದೀಕರಿಸಿದ ಹಣವನ್ನು ಬಳಕೆಮಾಡಿರುವ ಬಗ್ಗೆ ವಿವರ
1	17500000-00	19237313-00	19-03-08	ಉಳಿತಾಯ ಖಾತೆ ಸಂಖ್ಯೆ 54040241346 ಕ್ಕೆ ಜಮಾ
2	4191412-00	4411924-00	02-01-08	ಕೆ.ಜಿ.ಬಿ, ತುಮಕೂರು ಶಾಖೆಯಲ್ಲಿ ಹೂಡಿಕೆ ಸಂಖ್ಯೆ 010553 ರಲ್ಲಿ ಮರುಹೂಡಿಕೆ ಮಾಡಲಾಗಿದೆ.

28) ಎ.ಡಿ.ಬಿ. ಯೋಜನೆಯಡಿಯಲ್ಲಿನ ಕಾಮಗಾರಿ ಬಿಲ್‌ಗಳಲ್ಲಿ ಕಟಾಯಿಸಿದ ತೆರಿಗೆ ಬಗ್ಗೆ:

• 2007-08 ನೇ ಸಾಲಿನಲ್ಲಿ ಈ ಯೋಜನೆಯಡಿಯಲ್ಲಿ ಕೈಗೊಂಡಿರುವ ಕಾಮಗಾರಿಗಳ ಬಿಲ್ಲುಗಳನ್ನು ಲೆಕ್ಕ ತನಿಖೆಗೆ ಹಾಜರುಪಡಿಸಿರುವಂತೆ ಅವುಗಳಲ್ಲಿ ಗುತ್ತಿಗೆದಾರರಿಂದ ಸರ್ಕಾರದ ಪರವಾಗಿ ಕಟಾಯಿಸಿದ ತೆರಿಗೆಗಳಾದ ರಾಜಧನ, ಮಾರಾಟ ತೆರಿಗೆ ಮತ್ತು ಆದಾಯ ತೆರಿಗೆಗಳನ್ನು ಸರ್ಕಾರದ ಲೆಕ್ಕ ಶೀರ್ಷಿಕೆಗೆ ಜಮಾ ಮಾಡಿರುವುದು ಕಂಡುಬಂದಿರುತ್ತದೆ. ವಿವರವನ್ನು ಅನುಬಂಧ-___ ರಲ್ಲಿ ನೀಡಿದ್ದು ಫೋಷ್ಟಾರೆ ಈ ಕೆಳಕಂಡಂತೆ ಇರುತ್ತದೆ.

ಕ್ರಮ ಸಂಖ್ಯೆ	ವಿವರಗಳು	ರಾಜಧನ	ಮಾರಾಟ ತೆರಿಗೆ	ಆದಾಯ ತೆರಿಗೆ
1	2007-08 ನೇ ಸಾಲಿನಲ್ಲಿ ಕಟಾಯಿಸಿದ್ದು	228788	572049	286021
2	2007-08 ನೇ ಸಾಲಿನಲ್ಲಿ ಸರ್ಕಾರಕ್ಕೆ ಜಮಾ	228788	572049	286021
3	31-03-2008 ಕ್ಕೆ ಉಳಿಕೆ	ಇಲ್ಲ	ಇಲ್ಲ	ಇಲ್ಲ

29) ಮೇಳೇಕೋಟೆ ವೀರಸಾಗರ ಬಡಾವಣೆಯಲ್ಲಿ ಈ-9 ರಿಂದ ಈ-20 ರ ರಸ್ತೆಗಳ ಅನಧೀಕರಣ ಮತ್ತು ರಸ್ತೆ ಅಭಿವೃದ್ಧಿ ಕಾಮಗಾರಿಗಳಲ್ಲಿ ರಾಜಧನ ಕಡಿಮೆ ಕಟಾಯಿಸಿರುವುದು

ಈ ಕಾಮಗಾರಿಯ ಅಂದಾಜು ವೆಚ್ಚ 20.27 ಲಕ್ಷ ರೂ.ಗಳಾಗಿದ್ದು ಗುತ್ತಿಗೆದಾರರಾದ ಶ್ರೀ ಹೆಚ್.ಪಿ.ಮಲ್ಲಿಕಾರ್ಜುನ ರವರಿಗೆ ಚೆಕ್ ಸಂಖ್ಯೆ 144786 ದಿನಾಂಕ 25-02-2008 ರಲ್ಲಿ ಪಾವತಿಸಲಾಗಿದ್ದು ಕಾಮಗಾರಿಯ ಬಿಲ್, ಅಳತೆ ಪುಸ್ತಕ ಮತ್ತು ಅಂದಾಜು ಪಟ್ಟಿ ಕಡತವನ್ನು ಪರಿಶೀಲಿಸಲಾಗಿ ಸರ್ಕಾರದ ಆದೇಶ ಸಂಖ್ಯೆ ಸಿಐ50 ಎಂಎಂಎನ್ 2006 ದಿನಾಂಕ 23.06.2007 ರನ್ವಯ ರಾಜಧನವನ್ನು ಕಟಾಯಿಸಬೇಕಾಗಿದ್ದು ಕಡಿಮೆ ದರದಲ್ಲಿ ಕಟಾಯಿಸಿರುವುದು ಕಂಡುಬಂದಿದೆ. ವಿವರ ಈ ಕೆಳಕಂಡಂತೆ ಇರುತ್ತದೆ.

ಕ್ರಮ ಸಂಖ್ಯೆ	ವಿವರಗಳು	ದರ ರೂ.	ರಾಜಧನ ಕಟಾಯಿಸಬೇಕಾದ್ದು	ಕಟಾಯಿಸಿರುವುದು	ವ್ಯತ್ಯಾಸ
1	ಜಲ್ಲಿ 342 ಘ.ಮೀ.	78.90	26984	12654	14330-00
2	ಮರಳು 55 ಘ.ಮೀ.	55.20	3036	2365	671-00
		ಒಟ್ಟು	**30020**	**15019**	**15001-00**

ಕಡಿಮೆ ಕಟಾಯಿಸಿರುವ ರಾಜಧನ 150001-00 ರೂ.ಗಳನ್ನು ಸಂಬಂಧಪಟ್ಟ ಗುತ್ತಿಗೆದಾರರಿಂದ ವಸೂಲಿ ಮಾಡಿ ರಾಜಧನದ ಲೆಕ್ಕಶೀರ್ಷಿಕೆಗೆ ಜಮಾ ಮಾಡಿ ಮಾಹಿತಿ ನೀಡಲು ಸೂಚಿಸಿದೆ.

ಭಾಗ-7

30) ಲೆಕ್ಕ ತನಿಖಾ ಶುಲ್ಕ

ಈ ಸಂಸ್ಥೆಯು 2007-08 ನೇ ಸಾಲಿಗೆ ಪಾವತಿಸಬೇಕಾದ ಲೆಕ್ಕ ತನಿಖಾ ಶುಲ್ಕದ ವಿವರ ಕೆಳಕಂಡಂತೆ ಇರುತ್ತದೆ.

1) 2007-08 ನೇ ಸಾಲಿಗೆ ಜಮಾ	13,38,30,822-00
2) 2007-08 ನೇ ಸಾಲಿಗೆ ಖರ್ಚು	13,59,22,712-00
ಒಟ್ಟು ರೂ.	**26,97,53,534-00**
1) 2007-08 ನೇ ಸಾಲಿನಲ್ಲಿ ಸಾಲ ಮರುಪಾವತಿ	6,66,90,808-00
2) ಸ್ಲಂ ಸೆಸ್ ಪಾವತಿ	2,21,509-00
3) ಆದಾಯ ತೆರಿಗೆ, ಮಾರಾಟ ತೆರಿಗೆ ಮತ್ತು ರಾಜಧನ ಜಮಾ	15,24,277-00
4) ಹೂಡಿಕೆ ಹಣ ರೂ.	3,00,00,000-00
ಒಟ್ಟು ಕಳೆತ ರೂ.	**9,84,36,594-00**
ನಿವ್ವಳ ಮೊತ್ತ ರೂ.	**17,13,16,940-00**

ಲೆಕ್ಕ ತನಿಖೆ ಶುಲ್ಕ ಪ್ರತಿ 100-00 ರೂ.ಗಳಿಗೆ 0-20 ಪೈಸೆಯಂತೆ 2007-08 ನೇ ಸಾಲಿಗೆ ಒಟ್ಟು 342634-00 ರೂ. ಲೆಕ್ಕ ತನಿಖಾ ಶುಲ್ಕ ಪಾವತಿಸಬೇಕಾಗಿರುತ್ತದೆ. 2007-08 ನೇ ಸಾಲಿಗೆ ಲೆಕ್ಕ ತನಿಖಾ ಶುಲ್ಕದ ಬೇಡಿಕೆ ಪಾವತಿ ಹಾಗೂ ಬಾಕಿಯ ವಿವರ ಕೆಳಕಂಡಂತೆ ಇರುತ್ತದೆ.

01-04-2007 ಕ್ಕೆ ಪ್ರಾರಂಭ ಶಿಲ್ಕು	348032-00
2007-08 ನೇ ಸಾಲಿಗೆ ತಗಾದೆ	342634-00
ಒಟ್ಟು ರೂ.	690666-00
2007-08 ನೇ ಸಾಲಿಗೆ ಜಮಾ	ಇಲ್ಲ
31-03-2008 ಕ್ಕೆ ಬಾಕಿ	690666-00

ಬಾಕಿ ಇರುವ ಲೆಕ್ಕ ತನಿಖಾ ಶುಲ್ಕವನ್ನು ಕೂಡಲೇ ಸರ್ಕಾರದ ಸಂಬಂಧಿಸಿದ ಲೆಕ್ಕ ಶೀರ್ಷಿಕೆಗೆ ಜಮಾ ಮಾಡಲು ಸಂಸ್ಥೆಯ ಆಡಳಿತ ವರ್ಗ ಕ್ರಮ ತೆಗೆದುಕೊಳ್ಳುವುದು.

31)ಸಾಮಾನ್ಯ ಅಭಿಪ್ರಾಯ:

ಲೆಕ್ಕಪತ್ರಗಳ ನಿರ್ವಹಣೆಯಲ್ಲಿ ಇನ್ನೂ ಸುಧಾರಣೆಯಾಗಬೇಕಿದೆ. ಸಂಸ್ಥೆಯ ಕೆ.ಯು.ಐ.ಡಿ.ಎಫ್.ಸಿ. ಗೆ ಪಾವತಿಸಬೇಕಾದ ಸಾಲದ ಮೊತ್ತ (ಅಸಲು + ಬಡ್ಡಿ ಸೇರಿ) ಬಹಳ ಬಾಕಿ ಇದ್ದು, ಈ ಬಗ್ಗೆ ಆಯುಕ್ತರು ವೈಯಕ್ತಿಕ ಗಮನ ಹರಿಸಬೇಕಾಗಿದೆ.

ಸಹಿ/-
ಸಹಾಯಕ ನಿಯಂತ್ರಕರು
ಸ್ಥಳೀಯ ಲೆಕ್ಕ ಪರಿಶೋಧನಾ ವರ್ತುಲ
ತುಮಕೂರು

ಅನುಬಂಧ-1

ಭಾಗ-2 :: ಕಂಡಿಕೆ - 1

ನಗರಾಭಿವೃದ್ಧಿ ಪ್ರಾಧಿಕಾರ, ತುಮಕೂರು ಈ ಸಂಸ್ಥೆಯ ಹಿಂದಿನ ಸಾಲುಗಳ ವರದಿಗಳಲ್ಲಿ ತೀರುವಳಿಯಾಗದೇ ಬಾಕಿ ಉಳಿದಿರುವ ಆಕ್ಷೇಪಣಾ ಮೊಬಲಗು ಹಾಗೂ ವಸೂಲಾತಿಯ ಮೊಬಲಗಿನ ವಿವರಗಳು

ಕ್ರಮ ಸಂಖ್ಯೆ	ಲೆಕ್ಕ ತನಿಖಾ ವರದಿಯ ವರ್ಷ	ಆಕ್ಷೇಪಣೆ		ವಸೂಲಾತಿ	
		ಕಂಡಿಕೆ	ಮೊಬಲಗು	ಕಂಡಿಕೆ	ಮೊಬಲಗು
1	1993-94	9	97,21,313-00	18	5,00,449-00
2	1994-95	3	3,70,000-00	13	2,25,259-00
3	1995-96	1	1,66,254-00	3	31,196-00
4	1996-97	17	12,02,359-00	11	25,067-00
5	1997-98	--	--	9	50,205-00
6	1998-99	13	13,57,297-00	1	63,640-00
7	1999-2000	--	--	1	1,295-00
8	2000-2001	1	83,338-00	7	60,426-00
9	2001-2002	--	--	--	--
10	2002-2003	--	--	1	4,552-00
11	2003-2004	--	--	--	--
12	2004-2005	--	--	11	3,74,514-00
13	2005-2006	1	2,25,304-00	--	--
14	2006-2007	1	97,390-00	5	35,150-00
	ಒಟ್ಟು	**46**	**1,32,23,255-00**	**80**	**13,71,753-00**

ಸಹಿ/-
ಸಹಾಯಕ ನಿಯಂತ್ರಕರು
ಸ್ಥಳೀಯ ಲೆಕ್ಕ ಪರಿಶೋಧನಾ ವರ್ತುಲ
ತುಮಕೂರು

ಅನುಬಂಧ-2

ಭಾಗ-3 :: ಕಂಡಿಕೆ - 1

2007-08 ನೇ ಸಾಲಿನಲ್ಲಿ ತುಮಕೂರು ನಗರಾಭಿವೃದ್ಧಿ ಪ್ರಾಧಿಕಾರದ ಬ್ಯಾಂಕ್‌ಗಳಲ್ಲಿ ದಿನಾಂಕ 31-03-2008 ಕ್ಕೆ ನಗದಾಗದೆ ಇರುವ ಚೆಕ್ಕುಗಳ ವಿವರ

ಕ್ರಮ ಸಂಖ್ಯೆ	ಚೆಕ್ ಸಂಖ್ಯೆ	ದಿನಾಂಕ	ಪಾವತಿಸಲಾದ ಮೊತ್ತ	ಬ್ಯಾಂಕಿನ ಹೆಸರು
1	2	3	4	5
1	742737	22-06-2006	450.00	
2	744439	27-08-2006	225.00	
3	744457	11-09-2006	225.00	
4	744475	05-10-2006	450.00	
5	744489	05-10-2006	925.00	
6	742754	21-10-2006	225.00	
7	754994	18-12-2006	225.00	
8	79432	17-03-2007	483.00	
9	79438	29-03-2007	16500.00	
10	826661	19-06-2007	30819.00	ಎಸ್.ಬಿ.ಎಂ., ತುಮಕೂರು
11	826681	02-07-2007	2160.00	ಎಸ್.ಬಿ.ಎಂ., ತುಮಕೂರು
12	147754	01-08-2007	10239.00	ಎಸ್.ಬಿ.ಎಂ., ತುಮಕೂರು
13	147757	01-08-2007	6724.00	ಎಸ್.ಬಿ.ಎಂ., ತುಮಕೂರು
14	147805	29-09-2007	1000.00	ಎಸ್.ಬಿ.ಎಂ., ತುಮಕೂರು
15	215481	02-01-2008	2508.00	ಎಸ್.ಬಿ.ಎಂ., ತುಮಕೂರು
16	215487	02-01-2008	2000.00	ಎಸ್.ಬಿ.ಎಂ., ತುಮಕೂರು
17	515492	11-01-2008	465.00	ಎಸ್.ಬಿ.ಎಂ., ತುಮಕೂರು
18	702335	20-02-2008	8954.00	ಎಸ್.ಬಿ.ಎಂ., ತುಮಕೂರು
19	702338	25-02-2008	3434.00	ಎಸ್.ಬಿ.ಎಂ., ತುಮಕೂರು
20	683834	06-03-2008	1295.00	ಎಸ್.ಬಿ.ಎಂ., ತುಮಕೂರು
21	683845	07-03-2008	5600.00	ಎಸ್.ಬಿ.ಎಂ., ತುಮಕೂರು
22	683850	07-03-2008	484.00	ಎಸ್.ಬಿ.ಎಂ., ತುಮಕೂರು
23	683854	07-03-2008	15372.00	ಎಸ್.ಬಿ.ಎಂ., ತುಮಕೂರು
24	683855	07-03-2008	4198.00	ಎಸ್.ಬಿ.ಎಂ., ತುಮಕೂರು
25	702349	07-03-2008	134263.00	ಎಸ್.ಬಿ.ಎಂ., ತುಮಕೂರು
26	769252	20-03-2008	6353.00	ಎಸ್.ಬಿ.ಎಂ., ತುಮಕೂರು
27	769755	20-03-2008	9601.00	ಎಸ್.ಬಿ.ಎಂ., ತುಮಕೂರು
28	769761	20-03-2008	5612.00	ಎಸ್.ಬಿ.ಎಂ., ತುಮಕೂರು
			ಒಟ್ಟು	270789.00

ಸಹಿ/-

ಸಹಾಯಕ ನಿಯಂತ್ರಕರು

ಸ್ಥಳೀಯ ಲೆಕ್ಕ ಪರಿಶೋಧನಾ ವರ್ತುಲ, ತುಮಕೂರು

ಅನುಬಂಧ-3

ಭಾಗ-3 :: ಕಂಡಿಕೆ - 1

2007-08 ನೇ ಸಾಲಿನ ಜಮಾ ಮತ್ತು ಖರ್ಚಿನ ವಿವರಗಳು

ಕ್ರ. ಸಂ.	ಜಮಾ	ಮೊತ್ತ	ಕ್ರ. ಸಂ.	ಖರ್ಚು	ಮೊತ್ತ
1	2	3	4	5	6
1	ಉಳಿತಾಯ ಖಾತೆಯ ಮೇಲಿನ ಬಡ್ಡಿ	499710	1	ಸಿಬ್ಬಂದಿ ವೇತನ ಹಾಗೂ ಭತ್ಯೆಗಳು	2972720
2	ಪರಿಶೋಧನಾ ಶುಲ್ಕ	430963	2	ಅಧ್ಯಕ್ಷರ ಗೌರವಧನ	47477
3	ಭೂ ಬದಲಾವಣೆ ಶುಲ್ಕ	9177	3	ಸದಸ್ಯರ ಸಭಾಭತ್ಯೆ	880
4	ಸಾಮಾನ್ಯ ರಸೀತಿಗಳು	1870266	4	ದೂರವಾಣಿ ವೆಚ್ಚ	31460
5	ದಂಡ ಪಾರ್ಕ್/ ಸಿ.ಎ. ನಿವೇಶನ	6204174	5	ಸಾದಿಲ್ವಾರು ವೆಚ್ಚ	26852
6	ಉತ್ತಮತೆ ಶುಲ್ಕ	1574872	6	ಅತಿಥಿ ವೆಚ್ಚ	2333
7	ಮೇಲ್ವಿಚಾರಣಾ, ಪರಿವೀಕ್ಷಣಾ	497406	7	ಸಭಾ ವೆಚ್ಚ	6682
8	ಪರವಾನಗಿ, ಖಾತೆ ಶುಲ್ಕಗಳು	205426	8	ಮುದ್ರಣ ವೆಚ್ಚ	16500
9	ಅಭಿವೃದ್ಧಿ ಶುಲ್ಕ	2903945	9	ಲೇಖನ ಸಾಮಗ್ರಿಗಳು	36767
10	ಅಕ್ರಮ ಸಕ್ರಮದಿಂದ	31931405	10	ಜಾಹೀರಾತು	383861
